ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೫೨
ವಿಚಾರ ಸಾಹಿತ್ಯಮಾಲೆ – ೨೦
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ. ವಿ. ನರಸಿಂಹಮೂರ್ತಿ

ಹೊಸ ದರ್ಶನ ಮತ್ತು ವಾಸ್ತವತೆ

ಭವನದ ಗ್ರಂಥ ವಿಶ್ವವಿದ್ಯಾನಿಲಯ

ಹೊಸ ದರ್ಶನ ಮತ್ತು ವಾಸ್ತವತೆ

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I ೮೯–೧

ಮೂಲ

ಡಾ. ಫ್ರಿಟ್‌ಜೋಫ್ ಕ್ಯಾಪ್ರ

ಅನುವಾದ

ಬಿ. ಎಸ್. ಮಯೂರ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

Hosa Darshana Mattu Vaastavate: Kannada translation of *New Vision and Reality* : **Dr. Fritjof Capra;** Kannada translation by **B. S. Mayura;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxii + 36. Price : Rs. 10/-

ಮುದ್ರಣ : ೨೦೧೩
ಪುಟಗಳು : xxii + ೩೬
ಬೆಲೆ : ರೂ. ೧೦/–

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ|| ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

ಸಿದ್ದರಾಮಯ್ಯ
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

‘ಕನಕದಾಸರ ಕೃತಿ’ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು ‘ಸಂಶೋಧನ ಕೇಂದ್ರ’ ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ ‘ಕಾವೇರಿ ನ್ಯಾಯಾಧಿಕರಣದ ತೀರ್ಪಿ’ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ ‘ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ’ ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

ಬಸವರಾಜು, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

16/12/11

(ಬಸವರಾಜು)

ಕರ್ನಾಟಕ ಸರ್ಕಾರ

ಕೆ.ಆರ್. ರಾಮಕೃಷ್ಣ, ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಜಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಆರ್. ರಾಮಕೃಷ್ಣ)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು

ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆರ್ಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಇದು ಡಾ. ಫ್ರಿಟ್‌ಜೋಫ್ ಕ್ಯಾಪ್ರ ಅವರ *New Vision and Reality* ಎಂಬ ಪುಸ್ತಕದ ಕನ್ನಡ ಅನುವಾದ. ಇದನ್ನು 'ಹೊಸ ದರ್ಶನ ಮತ್ತು ವಾಸ್ತವತೆ' ಎಂಬ ಹೆಸರಿನಲ್ಲಿ ಶ್ರೀಮತಿ ಬಿ. ಎಸ್. ಮಯೂರ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿ ಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ	**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು	ಅಧ್ಯಕ್ಷರು, ವಿದ್ಯಾಭವನ, ಮೈಸೂರು
ವಿದ್ಯಾಭವನ, ಕರ್ನಾಟಕ	ಪ್ರಧಾನ ಸಂಪಾದಕ

ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೯೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

ಕೆ. ಎಂ. ಮುನ್ಷಿ

ಪೀಠಿಕೆ

ಶ್ರೀ ಅರಬಿಂದೊ ಸ್ಮಾರಕ ಉಪನ್ಯಾಸಗಳನ್ನು ನೀಡಲು ನನಗೆ ವಿಶೇಷ ಸಂತೋಷ ಮತ್ತು ಗೌರವಗಳು ಅಗುತ್ತಿವೆ. ಇದಕ್ಕಾಗಿ ನಾನು ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ ಮತ್ತು ನನ್ನನ್ನು ಆಹ್ವಾನಿಸಿದ್ದಕ್ಕಾಗಿ ಬೊಂಬಾಯಿ ವಿಶ್ವವಿದ್ಯಾನಿಲಯಕ್ಕೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಇಂಡಿಯ ದೇಶಕ್ಕೆ ನನ್ನ ಮೊದಲ ಭೇಟಿಗಾಗಿ, ಇಲ್ಲಿ ಸೇರಿರುವ ನಿಮ್ಮೆಲ್ಲರಿಗೂ ಹಾಗೂ ಇಡೀ ದೇಶದ ಜನಗಳಿಗೂ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಭಾರತೀಯ ಸಂಸ್ಕೃತಿಯ ನನ್ನ ಜೀವನದ ಮೇಲೆ ವಿಶೇಷ ಪರಿಣಾಮವನ್ನು ಬೀರಿದೆ ಹಾಗೂ ನನ್ನ ಆಧ್ಯಾತ್ಮಿಕ ಬೆಳವಣಿಗೆಗೆ ವಿಶೇಷ ಸಹಕಾರಿಯಾಗಿದೆ. ಹದಿನೈದು ವರ್ಷಗಳ ಹಿಂದೆ ನಾನು ಭಗವದ್ಗೀತೆಯನ್ನು ಓದಿದೆ; ಅಂದಿನಿಂದ ಇಂಡಿಯಾದ ಧಾರ್ಮಿಕ ಗ್ರಂಥಗಳು, ಸಂಗೀತ, ಪ್ರಾಚೀನ ದೇವಾಲಯಗಳ ಕಲ್ಲಿನ ಶಿಲ್ಪಗಳು, ನೃತ್ಯ, ಉಪಮೆಗಳು, ಸಂಕೇತಗಳು ಮತ್ತು ಆಧ್ಯಾತ್ಮಿಕ ಪರಂಪರೆಗಳು, ಹಾಗೂ ಜನಗಳ ಸೌಂದರ್ಯ ಮತ್ತು ಲಾಲಿತ್ಯಗಳು ನನ್ನನ್ನು ವಿಶೇಷವಾಗಿ ಆಕರ್ಷಿಸಿವೆ. ಆದುದರಿಂದ ಈ ದೇಶಕ್ಕೆ ಬಂದು ಇಲ್ಲಿ ಉಪನ್ಯಾಸ ನೀಡುವುದು ನನಗೆ ಹೆಚ್ಚಿನ ಮಹತ್ವ ತಂದಿದೆ. ಭಾರತೀಯ ಸಂಸ್ಕೃತಿಯೊಡನೆ ನನ್ನ ಸಂಪರ್ಕದಿಂದ ಉಂಟಾದ ಕೆಲವು ಸಂಗತಿಗಳನ್ನು ತಮಗೆ ತಿಳಿಸುವುದರ ಮೂಲಕ ಸ್ವಲ್ಪವಾದರೂ ನನ್ನ ಋಣವನ್ನು ತೀರಿಸುವ ಅವಕಾಶವಿದೆಂದು ನನ್ನ ಭಾವನೆ. ಇದರಿಂದ ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳೊಡನೆ ಸಹಕಾರ ಮತ್ತು ಸಂಪರ್ಕ ಏರ್ಪಡುವುದಕ್ಕೆ ಸಹಾಯವಾಗಬಹುದೆಂದು ಆಶಿಸುತ್ತೇನೆ.

ಬಿ. ಎಸ್. ಮಯೂರ

ಕೃತಜ್ಞತೆಗಳು

ಡಾ. ಫ್ರಿಟ್ ಜೋ ಕಾಪ್ರ ಅವರು ಬೊಂಬಾಯಿ ವಿಶ್ವವಿದ್ಯಾನಿಲಯದಲ್ಲಿ ನೀಡಿದ ೧೯೮೦ರ ಶ್ರೀ ಅರಬಿಂದೊ ಸ್ಮಾರಕ ಉಪನ್ಯಾಸವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಅನುಮತಿಯನ್ನು ನೀಡಿದ ಬೊಂಬಾಯಿ ವಿಶ್ವವಿದ್ಯಾನಿಲಯಕ್ಕೆ ಯೂನಿವರ್ಸಿಟಿ ಗ್ರಾಂಟ್ ಕಮಿಷನ್ ಪರವಾಗಿ ನಾವು ಕೃತಜ್ಞತೆಯನ್ನು ಅರ್ಪಿಸುತ್ತೇವೆ.

ಪರಿವಿಡಿ

Blank

ಹೊಸ ದರ್ಶನ ಮತ್ತು ವಾಸ್ತವತೆ

೧. ಆಧುನಿಕ ಭೌತವಿಜ್ಞಾನ ಮತ್ತು ಪೌರ್ವಾತ್ಯ ಅತೀಂದ್ರಿಯ ಜ್ಞಾನಗಳ ಸಾಮ್ಯ

ಬಿಕ್ಕಟ್ಟು ಮತ್ತು ಪರಿವರ್ತನೆ

ನಾನೊಬ್ಬ ಭೌತವಿಜ್ಞಾನಿ. ಈ ಶತಮಾನದ ಮೊದಲ ಮುವತ್ತು ವರ್ಷಗಳಲ್ಲಿ ಮೂಡಿದ, ನಮ್ಮ ಪರಿಕಲ್ಪನೆಗಳಲ್ಲಿನ ಬದಲಾವಣೆಗಳಿಂದ ಕೌತುಕ ಪಟ್ಟಿದ್ದೇನೆ. ಪ್ರಸ್ತುತ ತತ್ವಗಳಲ್ಲಿ ಅವು ವಿಸ್ತರಣೆಗೊಳ್ಳುತ್ತಲೇ ಇವೆ. ಹೊಸಕಲ್ಪನೆಗಳು ನಮ್ಮ ದೃಷ್ಟಿಕೋನವನ್ನು ಪರಿವರ್ತಿಸುತ್ತಿವೆ. ಡೆಕಾರ್ಲೆ, ನ್ಯೂಟನ್ನರ ಕಾಲದ ಸಾಂಪ್ರದಾಯಿಕ ದೃಷ್ಟಿಯು ಇಂದು ಜೀವಿ–ವನಸ್ಪತಿಗಳನ್ನೊಳಗೊಂಡಂತೆ ಒಂದು ಹೊಸ ಆಯಾಮವನ್ನೇ ಪಡೆದಿದೆ. ಇದು ಅಧ್ಯಾತ್ಮ ಮತ್ತು ಪರಂಪರಾಗತ ತಿಳುವಳಿಕೆಯ ದೃಷ್ಟಿಯನ್ನು ಬಹಳವಾಗಿ ಹೋಲುತ್ತದೆ. ಈ ಶತಮಾನದ ಆದಿಯಲ್ಲಿ ಭೌತವಿಜ್ಞಾನಿಗಳಿಗೆ, ಈ ಹೊಸ ವಾಸ್ತವ ದೃಷ್ಟಿಯನ್ನು ಒಪ್ಪಿಕೊಳ್ಳುವುದು ಸುಲಭವಾಗಿರಲಿಲ್ಲ. ಪರಮಾಣು ಮತ್ತು ಉಪಪರಮಾಣು ಕಣಗಳ ಪರಿಶೋಧನೆಯಿಂದ ಅದ್ಭುತವಾದ, ಅನಿರೀಕ್ಷಿತವಾದ ಲೋಕವೇ ತೆರೆದುಕೊಳ್ಳ ತೊಡಗಿತು. ಈ ವಾಸ್ತವವನ್ನು ಅರ್ಥಮಾಡಿಕೊಳ್ಳಲು ಸಾಹಸ ಪಡುತ್ತಿರುವಾಗ, ತಮ್ಮ ಮೂಲ ಕಲ್ಪನೆ ಚಿಂತನಾಕ್ರಮ, ತಮ್ಮ ಭಾಷೆ ಎಲ್ಲವೂ ಎಷ್ಟು ಅಸಮರ್ಪಕ ಎನ್ನುವ ನೋವು ಅವರನ್ನು ಕಾಡಿತು. ಅದು ಬರಿಯ ಬೌದ್ಧಿಕ ಸಮಸ್ಯೆಯಾಗಿ ಉಳಿಯದೆ, ಭಾವನಾತ್ಮಕವಾಗಿಯೂ ಬದುಕಿನ ವಾಸ್ತವತೆಯ ಸತ್ವಪರೀಕ್ಷೆ ಎನಿಸತೊಡಗಿತು. ಈ ಬಿಕ್ಕಟ್ಟನ್ನು ದಾಟಲು, ಅವರಿಗೆ, ಬಹಳ ಕಾಲ ಹಿಡಿಯಿತು. ಕೊನೆಗೂ ವಸ್ತು ಸ್ವಭಾವವನ್ನು ಕುರಿತ ಆಳವಾದ ಒಳನೋಟ ಮತ್ತು ಮಾನವ ಪ್ರಜ್ಞೆಯೊಡನೆ ಅದರ ಸಂಬಂಧದ ಅರಿವು ಮೂಡತೊಡಗಿತು.

ಇಂದು ದೇಶಗಳೂ ಸಮಾಜಗಳೂ ಇಂತಹುದೇ ಬಿಕ್ಕಟ್ಟನ್ನು ಎದುರಿಸುತ್ತಿವೆ ಎಂದು ನನಗನ್ನಿಸುತ್ತಿದೆ. ಅದರ ವಿವಿಧ ರೂಪಗಳನ್ನು ನಾವಿಂದು ವೃತ್ತಪತ್ರಿಕೆಗಳಲ್ಲಿ ಓದುತ್ತಿದ್ದೇನೆ. ನಮ್ಮಲ್ಲಿನ ಅರ್ಥವ್ಯವಸ್ಥೆಯೇ, ಹಣದುಬ್ಬರ, ನಿರುದ್ಯೋಗ, ನೀಗದ ಬಡತನ ಹಸಿವುಗಳಿಗೆ ಬಹುತೇಕ ಕಾರಣವಾಗಿದೆ. ಶಕ್ತಿ, ಪರಿಸರ, ಆರೋಗ್ಯ ಕ್ಷೇತ್ರಗಳಲ್ಲಿಯೂ ಬಿಕ್ಕಟ್ಟು ತಲೆದೋರುತ್ತಿದೆ. ಹಿಂಸೆ ಕ್ರೌರ್ಯಗಳು ಮೇಲ್ಮೈಯಾಗುತ್ತಿವೆ.

ಈ ಎಲ್ಲವೂ, ನಮ್ಮ ಅರಿವಿನ ಅಭಾವದಿಂದ ಮೂಡಿರುವ ಬಿಕ್ಕಟ್ಟಿನ ವಿವಿಧ ಮುಖಗಳು. ಇದು, ೧೯೨೦ರ ಭೌತವಿಜ್ಞಾನ ಕ್ಷೇತ್ರದಲ್ಲಿ ಮೂಡಿದ ಬಿಕ್ಕಟ್ಟಿನಂತೆ– ನ್ಯೂಟನ್ ಕಾರ್ಟೀಸಿಯನ್‌ರ ಹಳೆಯ ಪರಿಕಲ್ಪನೆಗಳನ್ನೇ ಆಧರಿಸಿಕೊಂಡು ಹೊಸದಾಗಿ ಗೋಚರಿಸಿದ ವಾಸ್ತವವನ್ನು ವಿವರಿಸಲು ಮಾಡುವ ವ್ಯರ್ಥ ಪ್ರಯತ್ನದಂತೆ ಕಾಣುತ್ತದೆ.

ಕಾರ್ಟೀಸಿಯನ್ ದೃಷ್ಟಿ, ಪಾಶ್ಚಿಮಾತ್ಯರ ವಿಶೇಷ ಕೊಡುಗೆ. ಆದರೆ, ವಿಜ್ಞಾನ–ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಅವರನ್ನೇ ಅನುಸರಿಸಿ, ಅಧ್ಯಯನ ನಡೆಸುತ್ತಿರುವ ಪೌರಾತ್ಯದಲ್ಲಿ ಕೂಡ ಇದೇ ಪರಿಕಲ್ಪನೆ ರೂಢಿಯಲ್ಲಿದೆ. ಭೌತವಿಜ್ಞಾನ, ಜೀವ ವಿಜ್ಞಾನ, ವೈದ್ಯವಿಜ್ಞಾನ, ಮನಃಶಾಸ್ತ್ರ, ಅರ್ಥಶಾಸ್ತ್ರ ಇತ್ಯಾದಿ ಕ್ಷೇತ್ರಗಳಲ್ಲಿ ಕಾರ್ಟೀಸಿಯನ್ ದೃಷ್ಟಿ ತನ್ನ ಮಿತಿಯನ್ನು ತಲುಪಿಬಿಟ್ಟಿದೆ. ನಾವೀಗ ಪರಸ್ಪರ ಸಂಬಂಧ ಏರ್ಪಟ್ಟಿರುವ ವಿಶ್ವದಲ್ಲಿದ್ದೇವೆ. ಜೀವ, ಮನಸ್ಸು, ಸಮಾಜ, ಪರಿಸರ ಎಲ್ಲವೂ ಪರಸ್ಪರ ಅವಲಂಬಿಸಿವೆ. ಪ್ರಪಂಚದ ಈ ಸ್ಥಿತಿಯನ್ನು ವಿವರಿಸಲು ನಮಗೀಗ ಕಾರ್ಟೀಸಿಯನ್ ದೃಷ್ಟಿ ಸಾಲುವುದಿಲ್ಲ. ನಮಗೀಗ ಸಮಗ್ರ ದೃಷ್ಟಿ–ಸಮಗ್ರತೆಯ ಅರಿವು ಬೇಕಾಗುತ್ತದೆ.

ನಮಗೀಗ ಬೇಕಾಗಿರುವುದು ಒಂದು ಹೊಸ ಮಾದರಿ– ವಾಸ್ತವದ ಹೊಸದರ್ಶನ. ಈ ರೀತಿಯ ಬದಲಾವಣೆ ಈಗಾಗಲೇ ಎಲ್ಲ ಕ್ಷೇತ್ರಗಳಲ್ಲಿಯೂ ಆರಂಭವಾಗಿದೆ. ಸಾಂಪ್ರದಾಯಿಕ ಆಲೋಚನೆಗಳನ್ನು ಸಮಗ್ರತೆಯ ದೃಷ್ಟಿ ಹಿಂದಕ್ಕಟ್ಟಿದೆ. ವ್ಯಾಪಕವಾದ, ಗಂಭೀರವಾದ ಈ ಬಿಕ್ಕಟ್ಟು ಸಂಧಿಕಾಲದಲ್ಲಿದೆ. ಅದರಿಂದ ಬದಲಾವಣೆಯು ಹಿಂದೆಂದೂ ಕಾಣದ ಪರಿವರ್ತನೆಯನ್ನು ತರಲಿದೆ. ಇಡೀ ಪ್ರಪಂಚದಲ್ಲಿ ಇದೊಂದು ಮಹತ್ವದ ತಿರುವು.

ನನ್ನ ಉಪನ್ಯಾಸಗಳಲ್ಲಿ ನಮ್ಮ 'ಮಾದರಿ'ಯ ಪರಿವರ್ತನೆ ಮತ್ತು ಸಾಂಸ್ಕೃತಿಕ ಪರಿವರ್ತನೆಗಳನ್ನು ಕುರಿತು ಮತ್ತು ಅವುಗಳ ವಿವಿಧ ಮುಖಗಳನ್ನು ಕುರಿತು ವಿಚಾರ ಮಾಡುತ್ತೇನೆ. ಆಧುನಿಕ ಭೌತವಿಜ್ಞಾನದಲ್ಲಿನ ಅದ್ಭುತ ಬದಲಾವಣೆಗಳನ್ನು ಮತ್ತು ಅದರಿಂದ ಕಳೆದ ದಶಕದಲ್ಲಿ ಮೂಡಿಬಂದ ಹೊಸ ಪರಿಕಲ್ಪನೆಗಳನ್ನು ವಿವರಿಸುತ್ತೇನೆ. ಭೌತವಿಜ್ಞಾನದ ಹೊಸ ಪರಿಕಲ್ಪನೆಗಳು ಪರಂಪರಾಗತ ತಿಳುವಳಿಕೆಯನ್ನು ಅದರಲ್ಲಿಯೂ ಭಾರತದ ಧಾರ್ಮಿಕ ಸಂಪ್ರದಾಯವನ್ನು ಹೋಲುವುದಂತೂ ಆತ್ಯಾಶ್ಚರ್ಯಕರವಾದ ವಿಚಾರ.

ನನ್ನ ಎರಡನೆಯ ಉಪನ್ಯಾಸದಲ್ಲಿ, ಭೌತವಿಜ್ಞಾನದಲ್ಲಿನ ಸಮಗ್ರ ಹಾಗೂ ಪರಿಸರವನ್ನು ಕುರಿತ ಚಿಂತನೆಯು ಬೇರೆ ಕ್ಷೇತ್ರಗಳಿಗೂ ವಿಸ್ತರಿಸುವ ಈಚಿನ ಪ್ರಯತ್ನಗಳನ್ನೂ, ಅದರಲ್ಲಿಯೂ ವಿಶೇಷವಾಗಿ ಜೀವ, ಮನಸ್ಸು, ಪ್ರಜ್ಞೆ ಮತ್ತು ವಿಕಸನಗಳನ್ನು ಕುರಿತಂತೆ– ಚರ್ಚಿಸುತ್ತೇನೆ. ಜೀವ ವಿಜ್ಞಾನ ಮತ್ತು

ಮನೋವಿಜ್ಞಾನವನ್ನು ಕುರಿತು ಇಂತಹ ಹೊಸ ಚಿಂತನಾಮಾರ್ಗವು ಧಾರ್ಮಿಕ ಪರಂಪರೆಗೆ ಸಮಾನಾಂತರವಾಗಿರುವುದನ್ನು ಕಾಣುತ್ತೇವೆ. ಜೈವಿಕ ವಸ್ತುಗಳನ್ನು ಮತ್ತು ಮನಸ್ಸನ್ನು ಈ ನೆಲೆಯಲ್ಲಿ ಅಧ್ಯಯನ ಮಾಡಿದಾಗ ಪಾಶ್ಚಿಮಾತ್ಯರ ವಿಜ್ಞಾನ ಮತ್ತು ಪೌರ್ವಾತ್ಯರ ಪ್ರತಿಭೆಗಳ ಮೂಲದಲ್ಲಿ ಅಡಗಿರುವ ಸಾಮ್ಯತೆ ಗೋಚರಿಸುತ್ತದೆ. ಕೊನೆಯದಾಗಿ ನನ್ನ ಮೂರನೆಯ ಉಪನ್ಯಾಸದಲ್ಲಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪೌರ್ವಾತ್ಯರ ಪ್ರತಿಭೆ ಮತ್ತು ಪಾಶ್ಚಿಮಾತ್ಯರ ವಿಜ್ಞಾನ ಇವುಗಳ ನಡುವಿನ ಸಮನ್ವಯ ಸಿದ್ಧಾಂತದ ಪರಿಣಾಮವನ್ನು ಕುರಿತು ಚರ್ಚಿಸುತ್ತೇನೆ.

ಪಾಶ್ಚಿಮಾತ್ಯರ ವಿಶ್ವದೃಷ್ಟಿ

ಭೌತವಿಜ್ಞಾನದ ಹೊಸ ಪರಿಕಲ್ಪನೆಗಳಿಗೂ, ಧಾರ್ಮಿಕ ಭಾವನೆಗಳ ಆಧಾರಗಳಿಗೂ ಇರುವ ಸಮಾನತೆಯನ್ನು ಕುರಿತು ಚರ್ಚಿಸುವ ಮೊದಲು ಆಧುನಿಕ ಭೌತವಿಜ್ಞಾನದಲ್ಲಿ ಹೊಸ ಪರಿಕಲ್ಪನೆಗಳು ತಂದ ಬದಲಾವಣೆಗಳನ್ನು ಕುರಿತು, ಅಂದರೆ, ಸಾಂಪ್ರದಾಯಿಕ ಭೌತವಿಜ್ಞಾನದ ಅಥವಾ ಪಾಶ್ಚಿಮಾತ್ಯರ ದೃಷ್ಟಿಕೋನವನ್ನು ಕುರಿತು, ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಇದು ವಿಶ್ವದ ಯಾಂತ್ರಿಕ ದೃಷ್ಟಿ. ಇದರ ಬೇರಿರುವುದು, ಕ್ರಿ.ಶ. ಐದನೆಯ ಶತಮಾನದ ಗ್ರೀಕ್ ಚಿಂತಕರಾದ ಡೆಮಾಕ್ರಿಟಿಸ್ ಮತ್ತಿತರ ಆಲೋಚನೆಗಳಲ್ಲಿ. ಅವರ ಅಭಿಪ್ರಾಯದಲ್ಲಿ ವಸ್ತುಗಳು ಅಚಲವಾದ ನಿರ್ಜೀವ ಘಟಕ ಪರಮಾಣುಗಳಿಂದ ನಿರ್ಮಾಣವಾಗಿವೆ. ಅವುಗಳು ಬಾಹ್ಯಬಲದಿಂದ ಚಲಿಸುತ್ತವೆ. ದೈವಿಕ ಮೂಲದ್ದೆಂದು ಭಾವಿಸಿರುವ ಈ ಒಲವು, ಮೂಲದಲ್ಲಿ, ವಸ್ತುವಿಗಿಂತ ಭಿನ್ನವಾದದ್ದು.

ಈ ಚಿತ್ರಣವು ಪಾಶ್ಚಿಮಾತ್ಯರ ಚಿಂತನೆಗೆ ಮುಖ್ಯವಾಯಿತು. ಅದು ಚೈತನ್ಯ ಮತ್ತು ವಸ್ತುಗಳ, ಮನಸ್ಸು ಮತ್ತು ದೇಹಗಳ ಭಿನ್ನತೆಗೆ ಎಡೆಮಾಡಿಕೊಟ್ಟಿತು. ಇದು ಪಾಶ್ಚಿಮಾತ್ಯರ ವೈಚಾರಿಕತೆಯ ವಿಶೇಷ ಲಕ್ಷಣ. ಹದಿನೇಳನೆಯ ಶತಮಾನದಲ್ಲಿ ಅಂದರೆ, ಡೆಕಾರ್ಲೆಯ ಕಾಲದಲ್ಲಿ ಈ ದ್ವೈತ ದೃಷ್ಟಿಯು ಸ್ಫುಟವಾಗಿ ಮೂಡಿತು. ಚೈತನ್ಯ ಮತ್ತು ಜಡವು ಭಿನ್ನ ಹಾಗೂ ಸ್ವತಂತ್ರ ಕ್ಷೇತ್ರಗಳೆಂಬ ವಿಚಾರವನ್ನು ಮೂಲವಾಗಿಟ್ಟುಕೊಂಡೇ ಡೆಕಾರ್ಟೆ ಪ್ರಕೃತಿಯನ್ನು ವೀಕ್ಷಿಸಿದನು. ವಿಶ್ವವು ಒಂದು ಯಂತ್ರವೇ. ಬರಿಯ ಯಂತ್ರವಷ್ಟೇ. ಪ್ರಕೃತಿಯು ಯಾಂತ್ರಿಕ ನಿಯಮಗಳಿಗನುಸಾರವಾಗಿ ವರ್ತಿಸುತ್ತದೆ. ಪ್ರತಿಯೊಂದು ಆಗುಹೋಗುಗಳನ್ನೂ, ಅದರ ಭಾಗಗಳ ಚಲನೆಯಿಂದ ವಿವರಿಸಬಹುದು. ಇದೇ ದೃಷ್ಟಿಯನ್ನು ಡೆಕಾರ್ಟ್ ಜೀವಿಗಳಿಗೂ ವಿಸ್ತರಿಸುತ್ತಾ, ಪ್ರಾಣಿ ಸಸ್ಯಗಳು ಕೂಡ ಯಂತ್ರಗಳಂತೆಯೇ ವರ್ತಿಸುತ್ತವೆ ಎಂದನು. ಮಾನವ ದೇಹವು ಕೂಡ ಅಂತಹ ಒಂದು ಯಂತ್ರದಂತೆಯೇ. ಆದರೆ ಅದರಲ್ಲಿ

ವಿವೇಚನೆಯುಳ್ಳ ಒಂದು ಆತ್ಮವಿದೆ. ಆದರೆ ಮಾನವ ದೇಹವು, ಪ್ರಾಣಿಯಂತ್ರದಿಂದ ಭಿನ್ನವಾದದ್ದಲ್ಲ.

ವಿಶ್ಲೇಷಣಾತ್ಮಕವಾದ ಚಿಂತನೆಯೇ, ಡೆಕಾರ್ಟೆಯ ಜ್ಞಾನಾರ್ಜನಾ ಮಾರ್ಗದ ಮುಖ್ಯ ಸೂತ್ರ. ಸಮಸ್ಯೆಗಳನ್ನೂ, ಚಿಂತನೆಗಳನ್ನೂ ವಿಭಜಿಸಿ ಅನಂತರ ಅವನ್ನು ಕ್ರಮಬದ್ಧವಾಗಿ ಜೋಡಿಸುವುದು ಅವನ ರೀತಿ. ಇದು ಆಧುನಿಕ ವೈಜ್ಞಾನಿಕ ಚಿಂತನೆಗೆ ಅವಶ್ಯವಾದದ್ದು. ವೈಜ್ಞಾನಿಕ ಪ್ರಗತಿಗೆ ಮತ್ತು ಅನೇಕ ಕ್ಲಿಷ್ಟವಾದ ತಾಂತ್ರಿಕ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಮತ್ತು ವೈಜ್ಞಾನಿಕ ತತ್ವಗಳ ಪ್ರತಿಪಾದನೆಗೆ ಇದು ಉಪಯುಕ್ತವಾದ ಮಾರ್ಗ ಕೂಡಾ. ಆದರೆ ಕಾರ್ಟೀಸಿಯನ್ ವಿಚಾರಧಾರೆಗೆ ಅತಿಯಾಗಿ ಒತ್ತುಕೊಟ್ಟಿದ್ದರಿಂದ, ಸಾಮಾನ್ಯ ಚಿಂತನೆಯ ಆಲೋಚನಾ ಶಿಸ್ತಿನ ವಿಶಿಷ್ಟ ವಿಭಜನಾಕ್ರಿಯೆಗೆ ಮಾರ್ಗವಾಯಿತು. ಅದಲ್ಲದೆ, ವಿಜ್ಞಾನ ಕ್ಷೇತ್ರದಲ್ಲಿ ವ್ಯಾಪಕವಾಗಿರುವ ವಿಭಜಿಸಿ ಅಧ್ಯಯಿಸುವ ದೃಷ್ಟಿಗೂ, ಸಂಕೀರ್ಣವಾದ ಸಂಗತಿಗಳ ಎಲ್ಲ ಮುಖಗಳನ್ನು ವಿಭಾಗಗಳಾಗಿ ವಿಂಗಡಿಸಿ ಅರ್ಥಮಾಡಿಕೊಳ್ಳಬಹುದೆಂಬ ನಂಬಿಕೆಗೂ ದಾರಿಯಾಯಿತು.

ಡೆಕಾರ್ಟೆ ನಿರ್ಮಿಸಿದ ಪರಿಕಲ್ಪನಾ ಚೌಕಟ್ಟನ್ನು ಯಾಂತ್ರಿಕ ದೃಷ್ಟಿಗೆ ಬೇಕಾದ ಕ್ರಮಬದ್ಧವಾದ ಗಣಿತವನ್ನು ವೃದ್ಧಿಸಿದ, ನ್ಯೂಟನ್, ಬಹಳ ಉತ್ಸಾಹದಿಂದ ಪೂರ್ಣಗೊಳಿಸಿದ. ಹದಿನೇಳನೆಯ ಶತಮಾನದ ಉತ್ತರಾರ್ಧದಿಂದ ಹತ್ತೊಂಬತ್ತನೆಯ ಶತಮಾನದವರೆಗೆ ನ್ಯೂಟನ್ನನ 'ವಿಶ್ವದ ಮಾದರಿ' ವಿಜ್ಞಾನ ಪ್ರಪಂಚವನ್ನು ಏಕಮೇವಾ ದ್ವಿತೀಯವಾಗಿ ಆಳಿತು. ಜೈವಿಕ ವಿಜ್ಞಾನ, ಸಾಮಾಜಿಕ ವಿಜ್ಞಾನ, ಮಾನವಿಕ ವಿಜ್ಞಾನ ಎಲ್ಲವೂ ಇದೇ ಯಾಂತ್ರಿಕ ದೃಷ್ಟಿಯನ್ನು ಒಪ್ಪಿಕೊಂಡು, ಸಾಂಪ್ರದಾಯಿಕ ಭೌತವಿಜ್ಞಾನದ ವಿವರಣೆಯೇ ವಾಸ್ತವವಾದದ್ದೆಂದು ನಂಬಿ ಅದರಂತೆ ತಮ್ಮ ತಮ್ಮ ತತ್ವಗಳನ್ನು ರೂಪಿಸಿಕೊಂಡವು.

ಪೌರ್ವಾತ್ಯರ ದೃಷ್ಟಿ

ಯಾಂತ್ರಿಕ ದೃಷ್ಟಿಗೆ ವಿರುದ್ಧವಾಗಿ, ಪೌರ್ವಾತ್ಯರ ದೃಷ್ಟಿ ಜೀವಂತ ಹಾಗೂ ಸಮಗ್ರವಾದುದು ಎನ್ನಬಹುದು. ಪೌರ್ವಾತ್ಯರ ಅತೀಂದ್ರಿಯ ಜ್ಞಾನ ದೃಷ್ಟಿಯಲ್ಲಿ ಗೋಚರವಾದ ಸರ್ವವೂ ಪರಸ್ಪರ ಸಂಬಂಧವುಳ್ಳವು ಹಾಗೂ ಪರಮ ವಾಸ್ತವದ ವಿವಿಧ ಮುಖಗಳು. ಅಳತೆಮಾಡಿ ವಿಭಜಿಸಿ ಕಾಣುವ ನಮ್ಮ ಮನೋಭಾವದಿಂದ ಉಂಟಾಗುವ ಪರಿಣಾಮ, ನಾವು ದೃಗ್ಗೋಚರವಾದುವನ್ನು ವಿಭಜಿಸಿ, 'ಪ್ರತೇಕವಾದ ವ್ಯವಸ್ಥೆ' ಎಂದು ಮಂಡಿಸುವ ನಮ್ಮ ವಿಚಾರವನ್ನು ಅವರು 'ಭ್ರಮೆ' ಎನ್ನುತ್ತಾರೆ. ಅದನ್ನೇ ಬೌದ್ಧ ಸಿದ್ಧಾಂತದಲ್ಲಿ 'ಅವಿದ್ಯಾ'– ಅದು ಮಾನಸಿಕ ಕ್ಷೋಭೆಯಿಂದ ಉಂಟಾಗುವ ಸ್ಥಿತಿ– ಅದನ್ನು ದಾಟಬೇಕು ಎನ್ನುತ್ತಾರೆ.

"ಮನಸ್ಸು ಕಲಕಿಹೋದಾಗ ವಸ್ತುಗಳು ವಿವಿಧ ರೂಪದಲ್ಲಿ ಕಾಣುತ್ತವೆ, ಮನಸ್ಸು ಶಾಂತವಾಗಿದ್ದಾಗ ವೈವಿಧ್ಯತೆ ಮಾಯವಾಗಿಬಿಡುತ್ತದೆ" ಎಂದು ಅಶ್ವಘೋಷ ಹೇಳುತ್ತಾನೆ.

ಪ್ರಕೃತಿಯನ್ನು ವಿಂಗಡಿಸುವುದು ನಮ್ಮ ದಿನನಿತ್ಯದ ವ್ಯವಹಾರಕ್ಕೆ ಅವಶ್ಯ ಎನಿಸಬಹುದು. ಆದರೆ, ಅದು ವಾಸ್ತವದ ಮೂಲ ಗುಣವಿಶೇಷ ಅಲ್ಲ. ಪೌರ್ವಾತ್ಯರ ಅತೀಂದ್ರಿಯ ಜ್ಞಾನದಲ್ಲಿ ವಸ್ತುವು ಅಸ್ಥಿರ ಮತ್ತು ಚಂಚಲ ಸ್ವಭಾವದ್ದು. ಪೌರ್ವಾತ್ಯರ ವಿಶ್ವ ಕ್ರಿಯಾಶೀಲವಾದದ್ದು; ಕಾಲ ವ್ಯಕ್ತಿ ಚಲನಶೀಲತೆಯೇ ಅದರ ಗುಣವಿಶೇಷ.

ಪಾಶ್ಚಾತ್ಯರಲ್ಲಿಯೂ, ವಿಜ್ಞಾನ ಯುಗದ ಆರಂಭ ಕಾಲದಲ್ಲಿ, ವಾಸ್ತವದ ಕ್ರಿಯಾಶೀಲ ಗುಣವು, ಭೌತವಿಜ್ಞಾನಿಗಳ ಮನದಾಳದಲ್ಲಿದ್ದಿತು. ಕ್ರಿ.ಪೂ. ಆರನೆಯ ಶತಮಾನದಲ್ಲಿ ವಸ್ತುಗಳ ಮೂಲ ಸ್ವಭಾವವನ್ನು ಅರಿಯುವುದು, ಗ್ರೀಕ್ ಸಿದ್ಧಾಂತಿಗಳ ಗುರಿಯಾಗಿತ್ತು. ಅದನ್ನು ಅವರು 'ಫ್ಯೂಸಿಸ್' ಎಂದರು. ಅದು ಇಂದಿನ 'ಫಿಸಿಕ್ಸ್'. ಇಂಡೋ ಯೂರೋಪಿಯನ್‌ನಲ್ಲಿ 'ಭಿಯು' ಎನ್ನುವ ಕ್ರಿಯಾಪದಕ್ಕೆ 'ವೃದ್ಧಿಸು' ಎಂದರ್ಥ. ಸಂಸ್ಕೃತದ 'ಬ್ರಹ್ಮನ್' ಪದದ ಮೂಲ ಕೂಡ ಇದೇ. ಇಂಡೋ ಯೂರೋಪಿಯನ್ ಭಾಷೆಯ ಕ್ರಿಯಾಪದ. 'ಅದೂ ಕೂಡ ವಸ್ತುಗಳ ಮೂಲ ಸ್ವಭಾವವನ್ನು ಕುರಿತು ಹೇಳುತ್ತದೆ. ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ದೇಶಗಳ ಪ್ರಾಚೀನ ಋಷಿಗಳು ವಾಸ್ತವವನ್ನು ಬೆಳವಣಿಗೆ, ಚಲನೆ ಮತ್ತು ಬದಲಾವಣೆಗಳಿಂದಲೇ ಅರ್ಥೈಸಿದರು. ಅಧ್ಯಾತ್ಮಿಕ ದೃಷ್ಟಿಯಲ್ಲಿ ಇಡೀ ವಿಶ್ವವು ಅಖಂಡವಾದುದು– ನಿರಂತರ ಚಲನೆಯಲ್ಲಿರುವ, ಬದುಕಿರುವ, ಜೀವಂತವಾಗಿರುವ ಆದರೂ ಧಾರ್ಮಿಕವಾಗಿಯೂ, ಯಾಂತ್ರಿಕವಾಗಿಯೂ ಇರುವಂತಹುದು. ಈ ಚಿತ್ರಣದ ಮುಖ್ಯ ಲಕ್ಷಣಗಳು ಆಧುನಿಕ ಭೌತವಿಜ್ಞಾನದಲ್ಲಿ ಹೇಗೆ ರೂಪತಳೆದಿದೆ ಎಂಬುದನ್ನು ಹೇಳುತ್ತೇನೆ.

ಪರಮಾಣು ಭೌತವಿಜ್ಞಾನ

ಪರಮಾಣುಗಳನ್ನು ಕುರಿತ ಪ್ರಯೋಗಗಳು ನೀಡಿದ ರೋಚಕ, ಪೂರ್ತಿ ಅನಿರೀಕ್ಷಿತ ಫಲಿತಾಂಶಗಳು ಈ ಶತಮಾನದ ಆದಿಯಲ್ಲಿಯೇ ಗೋಚರವಾದವು. ಪ್ರಾಚೀನ ನಂಬಿಕೆಯಂತೆ, ಅವು ಗಟ್ಟಿಯಾದ ಘನಕಣಗಳಲ್ಲಿ ಬದಲಿಗೆ ಪರಮಾಣುಗಳು ಅತಿ ಹೆಚ್ಚಿನ ನಿರ್ವಾತ ಪ್ರದೇಶದಲ್ಲಿ ಅತಿ ಸಣ್ಣ ಕಣಗಳು– ಎಲೆಕ್ಟ್ರಾನ್– ಒಂದು ಕೇಂದ್ರ ಕಣದ ಸುತ್ತಲೂ ಪ್ರದಕ್ಷಿಣೆ ಹಾಕುತ್ತಿರುವ ವ್ಯವಸ್ಥೆ ಎಂಬ ಸತ್ಯಾಂಶದ ಪ್ರಕಟಣೆಯಾಯಿತು. ೧೯೨೦ರ ದಶಕದಲ್ಲಿ ತಾತ್ವಿಕ ಸಿದ್ಧಾಂತ ಆಧಾರವುಳ್ಳ ಕ್ವಾಂಟಂ ಸಿದ್ಧಾಂತವು ಈ ಉಪಕರಣಗಳು, ಹಿಂದೆ ನಂಬಿದಂತೆ, ಎಲೆಕ್ಟ್ರಾನ್‌ಗಳು ಮತ್ತು ಕೇಂದ್ರದಲ್ಲಿರುವ ನ್ಯೂಟ್ರಾನ್, ಪ್ರೋಟಾನ್‌ಗಳು– ಇವು ಯಾವುವೂ ಘನಕಣಗಳಲ್ಲಿ, ಅವು ಅಗೋಚರ ಅಸ್ತಿತ್ವವುಳ್ಳವು ಎಂದು ಪ್ರತಿಪಾದಿಸಿತು. ನಾವು ನೋಡುವ

ರೀತಿಗನುಗುಣವಾಗಿ ಅವು ಒಮ್ಮೆ ಕಣದಂತೆ, ಒಮ್ಮೆ ಅಲೆಯಂತೆ ಕಾಣಿಸಿಕೊಳ್ಳುತ್ತವೆ. ವಸ್ತುವಿನ 'ದ್ವಿರೂಪ' ಬಹಳ ಗೊಂದಲ ಉಂಟುಮಾಡುತ್ತದೆ. ಅಲೆ ಇಡೀ ವಾತಾವರಣದಲ್ಲಿ ಹರಡಿಕೊಳ್ಳಬಹುದಾದರೆ, ಕಣ ಒಂದು ನಿರ್ದಿಷ್ಟ ಸ್ಥಳದಲ್ಲಿರಬೇಕು.

ವಸ್ತುವಿನ ಈ ವ್ಯತಿರಿಕ್ತ ಚಿತ್ರಣಗಳಿಗೆ ಕೊನೆಗೂ ಒಂದು ಅನಿರೀಕ್ಷಿತ ಸಮಾಧಾನ ದೊರೆಯಿತು. ಈ ಸಮಾಧಾನವು ವಸ್ತುವಿನ ವಾಸ್ತವಿಕತೆಯ, ಯಾಂತ್ರಿಕ ದೃಷ್ಟಿ, ಪರಿಕಲ್ಪನೆಯ ಅಡಿಪಾಯವನ್ನೇ ಮೀಟಿ ಬಿಟ್ಟಿತು. ಉಪಕರಣಗಳ ಸ್ತರದಲ್ಲಿ, ವಸ್ತುವು ನಿಶ್ಚಿತ ಸ್ಥಳದಲ್ಲಿರದೆ, ಇರುವ ಸಾಧ್ಯತೆಯನ್ನು ಮಾತ್ರ ತೋರಿಸುತ್ತದೆ. ಕ್ವಾಂಟಂ ಸಿದ್ಧಾಂತದಲ್ಲಿ ಇದನ್ನು ಸಂಭವನೀಯತೆ ಎನ್ನುತ್ತಾರೆ. ಈ ಸಂಭವನೀಯತೆಯ ಗಣಿತವು ತರಂಗದ– ಕಂಪಿಸುವ ತಂತುವಿನ– ಗಣಿತ ರೂಪವನ್ನು ಹೋಲುತ್ತದೆ. ಅದರಿಂದಲೇ, ಕಣಗಳು ಅಲೆಯ ರೂಪವನ್ನೂ ಪಡೆಯಬಹುದು ಎನ್ನುತ್ತಾರೆ. ಆದರೆ ಅವು ನೀರಿನ ಅಥವಾ ಶಬ್ದದ ಅಲೆಗಳಂತೆ ಮೂರು ಆಯಾಮಗಳಲ್ಲಿ ವ್ಯಕ್ತವಾಗುವ ಅಲೆಗಳಲ್ಲಿ ಅವು ಸಂಭವನೀಯ ಅಲೆಗಳು, ಅಲೆಗಳ ಎಲ್ಲ ಗುಣವಿಶೇಷಗಳನ್ನೂ ಗಣಿತ ಭಾಷೆಯಲ್ಲಿ ಪ್ರಕಟಿಸುವ ಮತ್ತು ಕಣಗಳು ಇಂತಿಂತಹ ಸ್ಥಳದಲ್ಲಿ ಇಂತಿಂತಹ ಕಾಲದಲ್ಲಿ ಕಾಣಬಹುದಾದ ಸಂಭವವನ್ನು ತೋರಿಸುವ ಅಂಶಗಳನ್ನು ತೋರಿಸುತ್ತವೆ.

ಪರಮಾಣು ಸ್ಥರದಲ್ಲಿ, ಸಾಂಪ್ರದಾಯಿಕ ಭೌತವಿಜ್ಞಾನದ 'ಘನ' ವಸ್ತುಗಳು ಸಂಭವನೀಯ ಅಲೆಯ ರೂಪವನ್ನು ಧರಿಸಿ ಹರಡಿಕೊಂಡು ಬಿಡುತ್ತವೆ. ಕೊನೆಗೆ ಈ ರೂಪಗಳು, ಸಂಭವನೀಯತೆಯನ್ನಲ್ಲ, ಬದಲಿಗೆ ಪರಸ್ಪರ ಸಂಬಂಧಗಳ ಸಂಭವನೀಯತೆಯನ್ನು ಹೇಳುತ್ತವೆ. ಅಣು ಭೌತವಿಜ್ಞಾನದ ಬೆಳವಣಿಗೆಯನ್ನು ಎಚ್ಚರಿಕೆಯಿಂದ ಅವಲೋಕಿಸಿದರೆ ಯಾವ ಉಪಕರಣಗಳಿಗೂ ತಮ್ಮದೇ ಆದ ಒಂದು ಪ್ರತ್ಯೇಕತೆ ಇಲ್ಲ. ಆದರೆ ಅವುಗಳ ಇರವು ಮತ್ತು ಅಳತೆಯನ್ನು ಪರಸ್ಪರ ಸಂಬಂಧಗಳಿಂದಲೇ ಅರ್ಥಮಾಡಿಕೊಳ್ಳಬೇಕು. ಭೌತವಿಜ್ಞಾನಿಗೆ ಉಪಕರಣವು ಒಂದು ವಸ್ತುವಲ್ಲ, ವಸ್ತುಗಳ ಸಂಬಂಧ. ಈ 'ವಸ್ತು'ವು ಕೆಲವು 'ಇತರ' ವಸ್ತುಗಳ ಕೊಂಡಿ.

ಪರಮಾಣು ಭೌತವಿಜ್ಞಾನವು ವಿಶ್ವದ ಏಕತೆಯನ್ನು ತೆರೆದಿಡುತ್ತದೆ. ನಾವು ವಿಶ್ವವನ್ನು ಸ್ವತಂತ್ರ ಭಾಗಗಳಾಗಿ ವಿಂಗಡಿಸಲಾಗದು. ವಸ್ತುವಿನ ಒಳಹೊಕ್ಕುತ್ತಿದ್ದಂತೆಯೇ ನಮಗೆ ಕಾಣುವುದು ಪ್ರತ್ಯೇಕವಾದ ಬಿಡಿಭಾಗಗಳಲ್ಲ, ಬದಲಿಗೆ ಸಮಗ್ರತೆಯ ಭಾಗಗಳ ನಡುವಿನ ಒಂದು ಸಂಕೀರ್ಣಜಾಲ. ವೆರ್ನರ್ ಹೈಸೆನ್ ಬರ್ಗನ ಮಾತುಗಳಲ್ಲಿ,

"ಈ ಜಗತ್ತು ಘಟನೆಗಳ ನವುರಾದ ನೇಯ್ಗೆ. ಅದರಲ್ಲಿ ಸಂಬಂಧಗಳ ಎಳೆಗಳು ಹಾಸುಹೊಕ್ಕಾಗಿ ವ್ಯಾಪಿಸಿಕೊಂಡು ಇಡಿಯ ವಿನ್ಯಾಸವನ್ನು ನಿರ್ಧರಿಸುವಂತೆ ಕಾಣುತ್ತದೆ."

ಪೌರ್ವಾತ್ಯರ ಧರ್ಮದಲ್ಲಿಯೂ ಇದೇ ಭಾವನೆ ವ್ಯಕ್ತವಾಗುತ್ತದೆ. ಉದಾಹರಣೆಗೆ ಶ್ರೀ ಅರಬಿಂದೋ ಅವರ ಮಾತನ್ನು ಉಲ್ಲೇಖಿಸಬಹುದು:

"ವಸ್ತುವು ನಾವು ಕಾಣುವುದಕ್ಕಿಂತ ಭಿನ್ನವಾಗಿ ಉಂಟಾಗುತ್ತದೆ. ಯಾವುದೇ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ಅಲ್ಲ ಅಥವಾ ವಾತಾವರಣದಲ್ಲಿ ಪ್ರತ್ಯೇಕವಾಗಿ ಅಲ್ಲ. ಆದರೆ ಅಭಿನ್ನವಾದ ಭಾಗವಾಗಿ, ಸೂಕ್ಷ್ಮವಾಗಿ ದೃಗ್ಗೋಚರವಾಗುವ ಎಲ್ಲದರ ಏಕತೆಯ ಸಂಕೇತವಾಗಿ ಕಾಣುತ್ತದೆ."

"ಒಂದು ಮೂಲಕಣವು ಸ್ವತಂತ್ರವಾಗಿರಬಲ್ಲ, ವಿಶ್ಲೇಷಣೆಗೆ ನಿಲುಕದ ಪದಾರ್ಥವಲ್ಲ. ಅದೊಂದು ಸತ್ವ. ಹೊರಗಿನ ಇತರ ವಸ್ತುಗಳೊಡನೆ ಹಲವಾರು ಸಂಬಂಧಗಳನ್ನು ಹೊಂದಿರುವಂತಹುದು" ಎಂದು ಅಣು ವಿಜ್ಞಾನಿ ಹೆನ್ರಿ ಸ್ಟಾಪ್ ಹೇಳಿದರೆ, ನಾಗಾರ್ಜುನ ಹೇಳುವುದು ಹೀಗೆ:

"ವಸ್ತುಗಳು ತಮ್ಮ ಇರುವಿಕೆಗೆ ಪ್ರಕೃತಿ"ಯಲ್ಲಿ ಪರಸ್ಪರ ಅವಲಂಬಿತವಾಗಿವೆ, ಅವುಗಳಿಗೆ ತಮ್ಮದೇ ಅಸ್ತಿತ್ವವಿಲ್ಲ.

ವಸ್ತುಗಳ ಚಾಂಚಲ್ಯ

ಪರಮಾಣು ಸ್ತರದಲ್ಲಿ ವಸ್ತುಗಳು ಕಣಗಳಾಗಿಯೂ, ಅಲೆಯ ರೂಪದಲ್ಲಿಯೂ ತೋರುತ್ತವೆ. ಎಂದರೆ ಎಲ್ಲ ಸಂಗತಿಗಳಲ್ಲಿಯೂ ಅವು ಪರಸ್ಪರ ಹೆಣೆದುಕೊಂಡಿವೆ ಹಾಗೂ ಉಪಕಣಗಳು ವಿಶಿಷ್ಟವಾಗಿ ವರ್ತಿಸುತ್ತವೆ ಎಂದರ್ಥ. ಒಂದು ಸ್ಥಳದಲ್ಲಿ ಅವು 'ಇವೆ' ಎಂದರೆ, ಅವು ಅಲ್ಲಿ ಓಡಾಡುತ್ತಾ ಪ್ರತಿಕ್ರಿಯಿಸುತ್ತಿವೆ ಎಂದರ್ಥ. ಅವುಗಳು ಇರುವ ಸ್ಥಳ ಕಿರಿದಾದಷ್ಟೂ ಅವುಗಳ ಚಟುವಟಿಕೆ ತೀವ್ರವಾಗಿರುತ್ತದೆ. ಇದು ವಿಶೇಷವಾದ ಕ್ವಾಂಟಂ ಪರಿಣಾಮ– ಉಪಕಣಗಳ ಲೋಕದಲ್ಲಿನ ವಿದ್ಯಮಾನ– ಬೃಹತ್ ಕಣಗಳ ಕ್ಷೇತ್ರದಲ್ಲಿ ಅನುಭವಕ್ಕೆ ಬಾರದ ವಿದ್ಯಮಾನ– ಜಾಗ ಸೀಮಿತವಾದಷ್ಟೂ ಅವು ಹೆಚ್ಚು ಚಂಚಲವಾಗುತ್ತವೆ.

ಅಂದರೆ, ಪರಮಾಣು, ಉಪಪರಮಾಣು ಕಣಗಳು ಮೂಲತಃ ಚಂಚಲ ಸ್ವರೂಪದವು. ವಸ್ತುಗಳಲ್ಲಿ ಅಣು, ಪರಮಾಣು ಮತ್ತು ಕೇಂದ್ರದಲ್ಲಿನ ಬೀಜ ಕಣಗಳು ಪರಸ್ಪರ ಬಂಧಿತವಾಗಿರುತ್ತವೆ. ಅದರಿಂದ ಅವುಗಳಿಗೆ ಚಲಿಸುವ ಪ್ರವೃತ್ತಿ ಇರುತ್ತದೆ. ಕ್ವಾಂಟಂ ಸಿದ್ಧಾಂತದ ಪ್ರಕಾರ ಪರಮಾಣು ಯಾವತ್ತೂ ಶಾಂತವಾಗಿರುವುದಿಲ್ಲ. ಚಲನೆ ಅದರ ಸಹಜ ಗುಣ. ನಮಗೆ ಕಾಣುವ ಬೃಹತ್ ವಸ್ತುಗಳು ಜಡವಾಗಿ ತೋರಬಹುದು. ಆದರೆ ನಿಶ್ಚಲವಾಗಿ ಕಾಣುವ ಕಲ್ಲು ಇತ್ಯಾದಿಗಳನ್ನು ಸೂಕ್ಷ್ಮವಾಗಿ ವೀಕ್ಷಿಸಿದಾಗ ಅವುಗಳ ಚಟುವಟಿಕೆ ಗೋಚರವಾಗುತ್ತದೆ. ನಮ್ಮ ದೃಷ್ಟಿ ಸೂಕ್ಷ್ಮವಾದಷ್ಟೂ ಅವು ಜೀವ ತುಂಬಿಕೊಂಡಿರುವುದು ಗೋಚರಿಸುತ್ತದೆ. ನಮ್ಮ ಸುತ್ತಲಿನ ಎಲ್ಲ ವಸ್ತುಗಳೂ ಅಣು ಪರಮಾಣುಗಳ ಜೋಡಣೆಯಿಂದ

ಮೂಡಿವೆ. ನಾನಾ ತರಹದ ಬಂಧಗಳಿಂದ ಅವು ಒಂದಕ್ಕೊಂದು ಆಧಾರವಾಗಿ ಹೆಣೆದುಕೊಂಡಿವೆ. ಇಂತಹ ಹಂದರಗಳು ಜಡವಾಗಿಲ್ಲ. ಹೊರಗಿನ ವಾತಾವರಣದ ಉಷ್ಣತೆಗೆ ಅನುಸಾರವಾಗಿ ಕಂಪಿಸುತ್ತಲೇ ಇರುತ್ತವೆ. ಕಂಪಿಸುತ್ತಿರುವ ಹಂದರಗಳಲ್ಲಿ ಎಲೆಕ್ಟ್ರಾನ್‌ಗಳು ಪರಮಾಣು ಕೇಂದ್ರಕ್ಕೆ, ಬೀಜಕ್ಕೆ, ವಿದ್ಯುತ್ ಬಲದಿಂದ ಬಂಧಿಸಲ್ಪಟ್ಟಿರುತ್ತವೆ. ಅದರಿಂದಲೇ ಅವು ಪರಸ್ಪರ ಹತ್ತಿರವಾಗಿರುತ್ತವೆ. ಆದರೂ ಅಷ್ಟೇ ಅವಕಾಶದಲ್ಲಿ ವೇಗವಾಗಿ ಚಲಿಸುತ್ತಲೇ ಇರುತ್ತವೆ. ಪರಮಾಣು ಬೀಜದಲ್ಲಿ ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳು ಅತಿ ಕಿರಿದಾದ ಅವಕಾಶದಲ್ಲಿ ಅತಿ ತೀಕ್ಷ್ಣವಾದ ನ್ಯೂಕ್ಲಿಯರ್ ಬಲದಿಂದ ಬಂಧಿಸಲ್ಪಟ್ಟಿದ್ದು, ಅಲ್ಲಿಯೂ ಅವು ಊಹಿಸಲಾದ ವೇಗದಲ್ಲಿ ಕಂಪಿಸುತ್ತಿರುತ್ತವೆ.

ಆಧುನಿಕ ಭೌತವಿಜ್ಞಾನವು, ವಸ್ತುಗಳು ಜಡವಾಗಿಯಾಗಲೀ, ನಿಶ್ಚಲವಾಗಿಯಾಗಲೀ ಇಲ್ಲ. ಅವು ನಿರಂತರವಾಗಿ ಕುಣಿಯುತ್ತ ಕಂಪಿಸುತ್ತ ಇರುತ್ತವೆ ಎಂದು ಚಿತ್ರಿಸುತ್ತದೆ. ಅಣು ಪರಮಾಣುಗಳ ಹಂದರವು ಅವುಗಳ ಮಿಡಿತದ ಛಂದೋಬದ್ಧತೆಯನ್ನು ನಿರ್ಣಯಿಸುತ್ತದೆ. ಪೌರ್ವಾತ್ಯ ಸಿದ್ಧಾಂತಿಗಳು ವಸ್ತುವನ್ನು ಹೀಗೇ ಕಾಣುತ್ತಾರೆ. ಅವರು ವಿಶ್ವವನ್ನು ಚಲಿಸುವ, ಕಂಪಿಸುವ, ಚಟುವಟಿಕೆಯಿಂದ ಕೂಡಿದ ವ್ಯವಸ್ಥೆ ಕಾಣಬೇಕೆಂದು ಹೇಳುತ್ತಾರೆ. ಉದಾಹರಣೆಗೆ: ಡಾ.ಎಸ್. ರಾಧಾಕೃಷ್ಣನ್ ಅವರು ಬೌದ್ಧಧರ್ಮದ ಸಾರವನ್ನು ವಿವರಿಸುತ್ತ;

ಚಲನಶೀಲ ಸಿದ್ಧಾಂತವನ್ನು ಕುರಿತು ಬುದ್ಧ, ೨೫೦೦ ವರ್ಷಗಳ ಹಿಂದೆಯೇ ಅದ್ಭುತವಾಗಿ ಹೇಳಿದ್ದಾನೆ... ವಸ್ತುಗಳ ಪರಿವರ್ತನೆಗಳಿಂದ, ನಿರಂತರವಾದ ಮಾರ್ಪಾಡುಗಳಿಂದ ಪ್ರಭಾವಿತನಾಗಿ, ಬುದ್ಧ, ಒಂದು ಬದಲಾವಣೆಯ ಸಿದ್ಧಾಂತವನ್ನು ರೂಪಿಸಿದನು. ಅವನು ವಸ್ತುವನ್ನು 'ಬಲ', 'ಚಲನೆ' ಮತ್ತು ಅನುಕ್ರಮ ಪ್ರಕ್ರಿಯೆಗೆ ಒಳಪಡಿಸಿ, ವಾಸ್ತವತೆಯ ಕ್ರಿಯಾಶೀಲ ಪರಿಕಲ್ಪನೆಯನ್ನು ಒಪ್ಪಿಕೊಳ್ಳುತ್ತಾನೆ.

ಸಾಪೇಕ್ಷ ಸಿದ್ಧಾಂತ

ಕ್ವಾಂಟಂ ಸಿದ್ಧಾಂತದಿಂದ ಈಗ ಆಧುನಿಕ ಭೌತವಿಜ್ಞಾನದ ಮತ್ತೊಂದು ಅಡಿಪಾಯ ಐನ್‌ಸ್ಟೀನ್‌ನ ಸಾಪೇಕ್ಷ ಸಿದ್ಧಾಂತದ ಕಡೆಗೆ ಗಮನ ಹರಿಸೋಣ. ಅತಿವೇಗದ (ಬೆಳಕಿನ ವೇಗಕ್ಕೆ ಸಮೀಪವಾದ) ವಿಷಯ ಬಂದಾಗ ಸಾಪೇಕ್ಷ ಸಿದ್ಧಾಂತವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಇದು ಕಾಲ ಮತ್ತು ಅವಕಾಶಗಳ ಪರಿಕಲ್ಪನೆಯಲ್ಲಿ ತೀವ್ರವಾದ ಬದಲಾವಣೆಯನ್ನು ತಂದುಬಿಟ್ಟಿತು. ಅವಕಾಶಕ್ಕೆ ಮೂರೇ ಆಯಾಮವಲ್ಲವೆಂದೂ, ಕಾಲಕ್ಕೆ ಬೇರೆಯಾದ ಅಸ್ತಿತ್ವ ಇಲ್ಲವೆಂದೂ ತೋರಿಸಿತು. 'ಕಾಲ–ಅವಕಾಶ' ಎಂಬುದೊಂದು ಅವಿಭಾಜ್ಯವಾದ ವ್ಯವಸ್ಥೆ ಮತ್ತು ಅದು ನಾಲ್ಕು ಆಯಾಮದ "ಅಖಂಡ ದ್ರವ್ಯ" ಎಂದು ಸಾರಿತು. ಆದ್ದರಿಂದ ಸಾಪೇಕ್ಷ ಸಿದ್ಧಾಂತದಲ್ಲಿ

ನಾವು 'ಕಾಲ–ಅವಕಾಶ'ಗಳಲ್ಲಿ ಒಂದನ್ನು ಬಿಟ್ಟು ಇನ್ನೊಂದನ್ನು ಕುರಿತು ಮಾತನಾಡುವ ಹಾಗಿಲ್ಲ. ಈಗ ೭೫ ವರ್ಷಗಳಿಂದ ನಾವು ಸಾಪೇಕ್ಷ ಸಿದ್ಧಾಂತವನ್ನು ಅಭ್ಯಾಸ ಮಾಡುತ್ತಾ ಅದರ ಗಣಿತವನ್ನು ಕರಗತ ಮಾಡಿಕೊಂಡಿದ್ದೇವೆ. ಆದರೆ, ನಾಲ್ಕು ಆಯಾಮದ ಕಾಲ–ಅವಕಾಶವು ನಮ್ಮ ಇಂದ್ರಿಯಾನುಭವಕ್ಕೆ ನಿಲುಕುವುದಿಲ್ಲ. ಅದರಿಂದ ಸಾಪೇಕ್ಷ ಸಿದ್ಧಾಂತದ ಪರಿಕಲ್ಪನೆ ಸಹಜವಾಗಿ, ನೇರವಾಗಿ ಅರ್ಥವಾಗುವುದು ಕಷ್ಟ.

ಪೌರ್ವಾತ್ಯರ ಅತೀಂದ್ರಿಯ ಜ್ಞಾನದಲ್ಲಿ ಇಂತಹುದೇ ಒಂದು ಸಂದರ್ಭ ಕಾಣುತ್ತದೆ. ಋಷಿವರ್ಯರು ಸಾಮಾನ್ಯವಲ್ಲದ ಪ್ರಜ್ಞಾವಸ್ಥೆಯನ್ನು ತಲುಪಿದಾಗ ಸಾಮಾನ್ಯವಾದ ಮೂರು ಆಯಾಮಗಳನ್ನು ಮೀರಿದ ಉನ್ನತವಾದ ಬಹು ಆಯಾಮದ ವಾಸ್ತವ್ಯವನ್ನು ಅನುಭವಿಸುತ್ತಾರೆ. ಶ್ರೀ ಅರಬಿಂದೋ ಅವರು ನಾಲ್ಕನೆಯ ಆಯಾಮ–ದೃಗ್ಗೋಚರಿಸುವ ಸೂಕ್ಷ್ಮವಾದ ಬದಲಾವಣೆಯನ್ನು ಕುರಿತು ಹೇಳುತ್ತಾರೆ. ಸಾಪೇಕ್ಷ ಸಿದ್ಧಾಂತದ ವಾಸ್ತವದಂತೆ, ತಪಸ್ಸಿನ ಶಕ್ತಿಯಿಂದ ಅನುಭವಕ್ಕೆ ಗೋಚರವಾಗುವ ಬಹು ಆಯಾಮದ ವಾಸ್ತವವನ್ನು, ವಿವರಿಸಿ ಹೇಳುವುದು ಅಸಾಧ್ಯ. ಅಂತಹ ಜ್ಞಾನ ಸ್ತರದ ಆಯಾಮಗಳು, ಸಾಪೇಕ್ಷ ಭೌತ ವಿಜ್ಞಾನಗಳಲ್ಲಿನ ಆಯಾಮಗಳೇ ಆಗಿಲ್ಲದಿರಬಹುದು. ಆದರೆ, ಅವು ಋಷಿವರ್ಯರಿಗೆ, ಕಾಲ–ಅವಕಾಶವನ್ನು ಕುರಿತಂತೆ, ಅಂತಹುದೇ ಭಾವನೆಯನ್ನಂತೂ ಮೂಡಿಸುತ್ತವೆ. ಪೌರ್ವಾತ್ಯರ ವೇದಾಂತದಲ್ಲಿ ಕಾಲ–ಅವಕಾಶದ ವಾಸ್ತವವನ್ನು ಕುರಿತು ದೃಢವಾದ ಒಂದು ಅಂತರ್‌ದೃಷ್ಟಿ ಇರುವಂತೆ ಕಾಣುತ್ತದೆ. ಸಾಪೇಕ್ಷ ಭೌತವಿಜ್ಞಾನದ ವಿಶೇಷ ಲಕ್ಷಣವಾದ ಕಾಲ–ಅವಕಾಶಗಳ ಅವಿಭಾಜ್ಯತೆಯನ್ನು ಅದು ಪದೇಪದೇ ಒತ್ತಿ ಹೇಳುತ್ತದೆ. ಉದಾಹರಣೆಗೆ– ಜಪಾನಿನ ವಿದ್ವಾಂಸರಾದ ಡಿ.ಟಿ. ಸುಜುಕಿ ಅವರು ಮಹಾಯಾನ ಬೌದ್ಧ ಚಿಂತನೆಯನ್ನು ಕುರಿತು;

" 'ಅವತಂಸ್ತಕ' ಮತ್ತು ಅದರ ಚಿಂತನೆಯ ಮಹತ್ವದ ಅರಿವಾಗಬೇಕಾದರೆ, ನಾವು ಒಮ್ಮೆಯಾದರೂ ದೇಹ–ಮನಸ್ಸಿನ ನಾನು–ನೀನುಗಳ ನಡುವಿನ ವ್ಯತ್ಯಾಸವನ್ನು ಕಾಣದಂತಹ ಹಂತಕ್ಕೆ ಏರಬೇಕು. ಈ ಸ್ಥಿತಿ ಅನುಭವಕ್ಕೆ ಬರಬೇಕು, ನಮ್ಮ ಪರಿಸರವನ್ನು ಗಮನಿಸಿದಾಗ ವಸ್ತುಗಳ ಪರಸ್ಪರ ಸಂಬಂಧಗಳ ಅರಿವಾಗುತ್ತದೆ. ಬರಿಯ ಪ್ರಾದೇಶಿಕವಾಗಿ ಮಾತ್ರವಲ್ಲ ಕಾಲಿಕವಾಗಿಯೂ ಕೂಡ, ಕಾಲವಿಲ್ಲದೇ ಅವಕಾಶವಿಲ್ಲ, ಅವಕಾಶವಿಲ್ಲದೇ ಕಾಲವಿಲ್ಲ ಎನ್ನುವುದೇ ಶುದ್ಧವಾದ ಅನುಭವ."

ಭೌತವಿಜ್ಞಾನದಲ್ಲಿ, ಪ್ರಕೃತಿಗೋಚರ ಸಂಗತಿಗಳಿಗೆ ಆಧಾರವಾಗಿರುವುದು, ಕಾಲ–ಅವಕಾಶದ ಪರಿಕಲ್ಪನೆ. ಅದರಲ್ಲಿ ಸ್ವಲ್ಪ ಮಾರ್ಪಾಡಾದರೂ ಪ್ರಕೃತಿಯ ವಿವರಣೆಯಲ್ಲಿ ಚಿತ್ರದಲ್ಲಿ ಬದಲಾವಣೆ ಕಾಣುತ್ತದೆ. ದ್ರವ್ಯರಾಶಿಯು ಶಕ್ತಿಯ ಒಂದು

ರೂಪ ಎಂಬುದು ಇಂತಹ ಮಾರ್ಪಾಡಿನ ಮುಖ್ಯವಾದ ಪರಿಣಾಮ. ಅಚಲವಾಗಿರುವ ದ್ರವ್ಯ ಕೂಡ ಶಕ್ತಿಯ ಉಗ್ರಾಣವೆ.

ಕಾಲ–ಅವಕಾಶಗಳ ಏಕೀಕರಣ, ದ್ರವ್ಯ–ಶಕ್ತಿಗಳ ಸಮೀಕರಣಗಳು, ವಸ್ತುಗಳ ಕುರಿತಾದ, ನಮ್ಮ ಚಿತ್ರಣದ ಮೇಲೆ ತೀಕ್ಷ್ಣವಾದ ಪ್ರಭಾವವನ್ನು ಬೀರಿದೆ. ಕಣಗಳನ್ನು ಕುರಿತ ನಮ್ಮ ಕಲ್ಪನೆಯನ್ನೇ ಮಾರ್ಪಡಿಸಿದೆ. ಆಧುನಿಕ ಭೌತವಿಜ್ಞಾನದಲ್ಲಿ 'ದ್ರವ್ಯ' ಒಂದು ಘನರೂಪವಾಗಿ ಉಳಿದೇ ಇಲ್ಲ. ಕಣಗಳಿಗೆ ಕೂಡ ಒಂದು 'ಘನತೆ' ಇಲ್ಲ. ಅವೆಲ್ಲ ಶಕ್ತಿಯ ಚೊಂಪೆಗಳು. ಶಕ್ತಿ ಎಂದರೆ ಚಟುವಟಿಕೆಯಿಂದ ಕೂಡಿದ ಪ್ರಕ್ರಿಯೆ. ಉಪಕಣಗಳು, ಸಹಜವಾಗಿಯೇ, ಕ್ರಿಯಾಶೀಲವಾದುವು ಎಂದರ್ಥವಾಗುತ್ತದೆ.

ಇದು ಚೆನ್ನಾಗಿ ಅರ್ಥವಾಗಬೇಕಾದರೆ, ಕಾಲ ಅವಕಾಶಗಳು ನಾಲ್ಕು ಆಯಾಮದ ಅಖಂಡ ದ್ರವ್ಯದಲ್ಲಿ ಬೆಸೆದುಕೊಂಡಿವೆ ಎಂಬ ಸಾಪೇಕ್ಷವಾದದ ಚೌಕಟ್ಟಿನಲ್ಲಿ ಕಣಗಳನ್ನು ಚಿತ್ರಿಸಿಕೊಳ್ಳಬೇಕು. ಅಂತಹ ಚೌಕಟ್ಟಿನಲ್ಲಿ 'ಕಣ'ಗಳು ಮರಳಿನಂತೆ, ಬಿಲಿಯರ್ಡ್ ಚಂಡಿನಂತೆ, ಮೂರು ಆಯಾಮದಲ್ಲಿ ಕಾಣುವುದಿಲ್ಲ. ಬದಲಿಗೆ ಅವು ನಾಲ್ಕು ಆಯಾಮದ ಅಸ್ತಿತ್ವ ಹೊಂದಿರುವ, ಕಾಲ–ಅವಕಾಶದ ಭಾಗದಂತೆ ಗೋಚರವಾಗಬೇಕು. ಕಾಲ–ಅವಕಾಶದಲ್ಲಿ ಅವು ಕ್ರಿಯಾರೂಪವಾಗಿ ಕಾಣಬೇಕು. ಉಪಪರಮಾಣುಗಳು ಕ್ರಿಯಾಶೀಲ ಚಿತ್ರಾಕೃತಿಯಾಗಿ ಕಾಲ ಮತ್ತು ಅವಕಾಶದ ಭಾಗವಾಗಿ ಕಾಣಬೇಕು. ಅವಕಾಶದ ಭಾಗದಲ್ಲಿ ವಸ್ತುವಾಗಿ ಕಂಡರೆ, ಕಾಲದ ಭಾಗದಲ್ಲಿ ಅವು ಸಮೀಕೃತ ಶಕ್ತಿರೂಪವಾಗಿರುತ್ತದೆ. ಅದರಿಂದಲೇ ಸಾಪೇಕ್ಷ ಸಿದ್ಧಾಂತವು ವಸ್ತುವಿಗೆ ಸಹಜವಾದ ಶಕ್ತಿರೂಪವನ್ನು ಕೊಡುತ್ತದೆ. ಪರಮಾಣು, ಉಪಪರಮಾಣುಗಳ ಕ್ಷೇತ್ರದಲ್ಲಿ ಕಣಗಳು ವೇಗವಾಗಿ ಚಲಿಸುವುದೊಂದೇ ಅಲ್ಲ, ಕ್ರಿಯಾತ್ಮಕವಾಗಿಯೂ ಇರುತ್ತವೆ. ಚಟುವಟಿಕೆಯನ್ನೂ ದ್ರವ್ಯರಾಶಿಯನ್ನೂ ಬೇರ್ಪಡಿಸಲಾಗುವುದಿಲ್ಲ. ಅವು ಒಂದೇ ಕಾಲ ಅವಕಾಶದ ಬೇರೆ ಬೇರೆ ಮುಖಗಳು, ಅಷ್ಟೆ.

ವಿಶ್ವದಲ್ಲಿ ನರ್ತನ

ಕಾಲ–ಅವಕಾಶದ ಪ್ರವಾಹದಲ್ಲಿ ಕಣ–ಉಪಕಣಗಳ ಹುಟ್ಟು–ಸಾವುಗಳೇ ಒಂದು ಅದ್ಭುತವಾದ 'ದರ್ಶನ'. ದ್ರವ್ಯವು ಶಕ್ತಿಯ ಒಂದು ರೂಪ. ಅದರಿಂದ ಅದನ್ನು ನಾಶ ಮಾಡಲು ಸಾಧ್ಯವಿಲ್ಲ. ಆದರೆ, ಶಕ್ತಿಯ ಭಿನ್ನರೂಪವಾಗಿ ಪರಿವರ್ತಿಸ ಬಹುದು. ಉಪಕಣಗಳು ಒಂದಕ್ಕೊಂದು ಡಿಕ್ಕಿ ಹೊಡೆದಾಗ ಇದು ಸಾಧ್ಯವಾಗುತ್ತದೆ. ಅಂತಹ ಸಮಯದಲ್ಲಿ ಕೆಲವು ಕಣಗಳು ನಾಶವಾದರೂ ಅವುಗಳ ಶಕ್ತಿಯನ್ನು ಇತರ ಕಣಗಳು ಪಡೆದುಕೊಳ್ಳುತ್ತವೆ. ಕಣಗಳು ಅತಿ ವೇಗದಲ್ಲಿ ಡಿಕ್ಕಿ ಹೊಡೆದಾಗ ಅವುಗಳ ಚಲನ ಶಕ್ತಿಯು ಹೊಸದಾಗಿ ಹುಟ್ಟುವ ಕಣದ ದ್ರವ್ಯರಾಶಿಯಾಗುತ್ತದೆ.

ಈ ಸಂಗತಿಗಳನ್ನು ಅರ್ಥ ಮಾಡಿಕೊಳ್ಳಲು ಸಾಪೇಕ್ಷತಾವಾದವನ್ನು ಅನುಸರಿಸ ಬೇಕಾಗುತ್ತದೆ. ಏಕೆಂದರೆ ಈ ವಾದದನ್ವಯ ಕಣಗಳು ಚಂಚಲ ಚಿತ್ತಾರವನ್ನು ಹೊಂದಿದ್ದು ಅವುಗಳಲ್ಲಿನ ಶಕ್ತಿಯ ಭಾಗದಲ್ಲಿ ದ್ರವ್ಯರಾಶಿಯು ತೊಡಗಿಕೊಂಡಿರುವಂತೆ ನಮಗೆ ಕಾಣುತ್ತದೆ.

ಅತಿಶಕ್ತಿಯ ಉಪಕಣಗಳ ಡಿಕ್ಕಿಯ ಪರಿಣಾಮವನ್ನು ಅಧ್ಯಯನ ಮಾಡುತ್ತ, ಅವುಗಳ ಗುಣಲಕ್ಷಣಗಳನ್ನೂ ಅಧ್ಯಯನ ಮಾಡುವುದರಿಂದ ಕಣಭೌತವಿಜ್ಞಾನ ಕ್ಷೇತ್ರವು 'ಅತಿಶಕ್ತಿ ಭೌತವಿಜ್ಞಾನ' ಎಂದೇ ಪರಿಚಿತವಾಗಿದೆ. ಕಣ ವೇಗೋತ್ಕರ್ಷ ಉಪಕರಣಗಳಲ್ಲಿ ಕಣಗಳನ್ನು ಅವುಗಳ ವೇಗವನ್ನು ಹೆಚ್ಚಿಸುವುದು ಉಂಟು. ಅಂತಹ ಉಪಕಣಗಳಲ್ಲಿ ಕಣಗಳನ್ನು, ಪ್ರೋಟಾನ್, ಎಲೆಕ್ಟ್ರಾನ್ ದೊಡ್ಡ ವೃತ್ತಾಕಾರದ ವೇಗೋತ್ಕರ್ಷಕಗಳಲ್ಲಿ, ಅಯಸ್ಕಾಂತಗಳ ಸಮ್ಮುಖದಲ್ಲಿ, ಸುತ್ತಿಸಿ ಅವುಗಳು ಬೆಳಕಿನ ಕಣದ ವೇಗಕ್ಕೆ ಹತ್ತಿರವಾದ ವೇಗವನ್ನು ಪಡೆಯುವಂತೆ ಮಾಡುತ್ತಾರೆ. ಅನಂತರ ಅವನ್ನು ಬೇರೆ ನ್ಯೂಟ್ರಾನ್ ಅಥವಾ ಪ್ರೋಟಾನ್‌ಗಳಿಗೆ ಡಿಕ್ಕಿ ಹೊಡೆಯುವಂತೆ ಮಾಡುತ್ತಾರೆ.

ಕಣಗಳ ಸೃಷ್ಟಿ ಮತ್ತು ವಿನಾಶವು ಕೃತಕ ಪರಿಸರದಲ್ಲಿ, ಪ್ರಯೋಗಾಲಯದಲ್ಲಿ ನಡೆಯುತ್ತದೆ. ಇಲ್ಲಿ ಭೂಮಿಯ ಮೇಲೆ, ನಡೆಸುವ ಪ್ರಕ್ರಿಯೆಗಳಲ್ಲಿ, ಭಾರ ಕಣಗಳ ಸೃಷ್ಟಿಗೆ ಸಾಕಾಗುವಷ್ಟು ಶಕ್ತಿ ಇರುವುದಿಲ್ಲ. ಇದು ಸಹಜ. ಆದರೆ ಬಾಹ್ಯಾಕಾಶದಲ್ಲಿನ ವಿಚಾರವೇ ಭಿನ್ನವಾದದ್ದು. ನಕ್ಷತ್ರಗಳ ಗರ್ಭದಲ್ಲಿ, ಪ್ರಯೋಗಾಲಯದಲ್ಲಿ ನಡೆಸಿದಂತಹ 'ಡಿಕ್ಕಿ'ಗಳು ಸ್ವಾಭಾವಿಕವಾಗಿಯೇ ನಡೆದು, ಉಪಕಣಗಳು ಮೂಡುತ್ತಲೇ ಇರುತ್ತವೆ. ಪರಿಣಾಮವಾಗಿ ನಕ್ಷತ್ರಗಳು ಶಕ್ತಿಯನ್ನು ಹೊರಸೂಸುತ್ತಲೇ ಇರುತ್ತವೆ. ಈ ಶಕ್ತಿಯು ವಿದ್ಯುತ್–ಕಾಂತೀಯ ಅಲೆಯ ರೂಪದಲ್ಲಿ ಮತ್ತು ವಿವಿಧ ಕಣಗಳಿಂದ ಕೂಡಿದ ವಿಶ್ವಕಿರಣ ರೂಪದಲ್ಲಿ ಪ್ರಸಾರವಾಗುತ್ತಲೇ ಇರುತ್ತದೆ.

ವಿಶ್ವಕಿರಣಗಳು ಭೂಮಿಯ ವಾತಾವರಣವನ್ನು ಸಂಪರ್ಕಿಸಿದಾಗ ಅವು, ವಾತಾವರಣದಲ್ಲಿನ ಕಣಗಳಿಗೆ ಡಿಕ್ಕಿ ಹೊಡೆಯುತ್ತವೆ. ಅಲ್ಲಿ, ನಮ್ಮ ಪ್ರಯೋಗಾಲಯದಲ್ಲಿ ನಡೆದಂತಹ ಪ್ರಕ್ರಿಯೆಗಳು ನಿರಂತರವಾಗಿ, ಬಿರುಸಾಗಿ ನಡೆಯುತ್ತಲೇ ಇರುತ್ತವೆ. ನಿರಂತರವಾದ ಶಕ್ತಿ ಪ್ರವಾಹದಿಂದ ವಾತಾವರಣದಲ್ಲಿ ಕಣಗಳ ಹುಟ್ಟು ಸಾವು ನಡೆಯುತ್ತಲೇ ಇದ್ದು, ಶಕ್ತಿಯ ರೂಪ ಬದಲಾವಣೆಗಳು ಕೊನೆಯಿಲ್ಲದೇ ಸಾಗುತ್ತಿರುತ್ತವೆ. ಇಡೀ ವಿಶ್ವವೇ ಅಂತ್ಯವಿಲ್ಲದ ಚಟುವಟಿಕೆಯಿಂದ, ಲಯಬದ್ಧವಾಗಿ ನರ್ತಿಸುತ್ತಾ ಸೃಷ್ಟಿ–ಲಯಗಳ ಲೀಲೆಯಲ್ಲಿ ತಲ್ಲೀನವಾಗಿರುತ್ತದೆ.

ಕಣಗಳ ಸ್ತರದಲ್ಲಿ, ಅವುಗಳ ಶಕ್ತಿಯ ಹಂದರವು ಬದಲಾಯಿಸುತ್ತಾ ಇರುವುದನ್ನು ಕಲ್ಪಿಸಿಕೊಳ್ಳುವಾಗ, ಸಹಜವಾಗಿ ನಮಗೆ ಛಂದೋಬದ್ಧ ನೃತ್ಯದ ಚಿತ್ರ ಕಣ್ಮುಂದೆ ಬರುತ್ತದೆ. ಆಧುನಿಕ ಭೌತವಿಜ್ಞಾನವು ಚಲನೆ ಹಾಗೂ ಛಂದೋಗತಿಯು

ವಸ್ತುವಿನ ಲಕ್ಷಣದ ಅನಿವಾರ್ಯ ಗುಣ ಎಂದು ಹೇಳುತ್ತದೆ. ಭೂಮಿಯ ಮೇಲಾಗಲೀ, ಬಾಹ್ಯಾಕಾಶದಲ್ಲಿಯಾಗಲಿ 'ವಸ್ತು'ವಿನ ದಿವ್ಯನರ್ತನ ನಿರಂತರವಾಗಿ ನಡೆಯುತ್ತಲೇ ಇರುತ್ತದೆ.

ಪೌರ್ವಾತ್ಯರ ಅಧ್ಯಾತ್ಮದಲ್ಲಿಯ ವಿಶ್ವದ ದರ್ಶನವು, ಆಧುನಿಕ ಭೌತವಿಜ್ಞಾನದ ದೃಷ್ಟಿಯನ್ನು ಹೋಲುತ್ತದೆ. ಪ್ರಕೃತಿಯನ್ನು ಕುರಿತ ಅವರ ಅಂತರ್‌ದೃಷ್ಟಿಯಲ್ಲಿ ನೃತ್ಯರೂಪಕದ ವಿವರಣೆ ಇರುವುದರಲ್ಲಿ ಆಶ್ಚರ್ಯವಿಲ್ಲ. 'ವಿಶ್ವನರ್ತನ'ದ ಅತ್ಯಂತ ಸುಂದರವಾದ ರೂಪಾಲಂಕಾರವನ್ನು, ಭಾರತೀಯರು, ಶಿವತಾಂಡವ ನೃತ್ಯದಲ್ಲಿ ಕಾಣುತ್ತಾರೆ. ಭಾರತದ ಶ್ರೇಷ್ಠ ವಿದ್ವಾಂಸರಾದ ಆನಂದ ಕುಮಾರಸ್ವಾಮಿಯವರ ಅದ್ಭುತವಾದ ಅಭಿವ್ಯಕ್ತಿ;

'ಬ್ರಹ್ಮನ ಇರುಳಿನಲ್ಲಿ ಪ್ರಕೃತಿ ಜಡವಾಗಿರುತ್ತದೆ. ಶಿವನಿಚ್ಛೆ ಇಲ್ಲದೆ, ನೃತ್ಯ ಜರುಗುವುದಿಲ್ಲ. ಅವನು ಭಾವಾವೇಶದಿಂದ ಎದ್ದಾಗ ನೃತ್ಯದ ಅಲೆಗಳು ಜಡವಾತಾವರಣದಲ್ಲಿ ಪಸರಿಸಿ, ಎಚ್ಚರಿಸುವ ದನಿ ಮೊಳಗುತ್ತದೆ. ಎಲ್ಲವೂ ನೃತ್ಯದ ಮೋಡಿಗೆ ಸಿಲುಕಿ ಅವನ ಸುತ್ತಲೂ ಪ್ರಭಾವಳಿಯಂತೆ ನರ್ತಿಸುತ್ತವೆ. ಅವನು ತನ್ನ ಬಹುರೂಪವನ್ನು ಧರಿಸಿ ನರ್ತಿಸುತ್ತಾನೆ. ಕಾಲ ಪಕ್ವವಾದಾಗ ನಾಮರೂಪಗಳನ್ನೆಲ್ಲ ಭಸ್ಮ ಮಾಡಿ ಶಾಂತಿ ಉಂಟುಮಾಡುತ್ತಾನೆ. ಇದು ಕಾವ್ಯ–ವಿಜ್ಞಾನವೂ ಹೌದು.

ಆಧುನಿಕ ಭೌತವಿಜ್ಞಾನಕ್ಕೆ, ಉಪಕಣಗಳ ನರ್ತನವೇ ಶಿವತಾಂಡವ ನೃತ್ಯ. ಹಿಂದುಗಳ ಪುರಾಣ ರೀತ್ಯಾ ಈ ಸೃಷ್ಟಿ–ಲಯಗಳ ನಿರಂತರ 'ನರ್ತನ'ವೇ ಎಲ್ಲ ಸ್ಥಿತಿ, ಎಲ್ಲ ಕ್ರಿಯೆಗಳಿಗೂ ಮೂಲ. ವಿಶ್ವವರ್ತನಮಾನದ ರೂಪಕವು ಪುರಾಣವನ್ನೂ, ಧಾರ್ಮಿಕ ಕಲೆಯನ್ನೂ ಮತ್ತು ಆಧುನಿಕ ಭೌತವಿಜ್ಞಾನವನ್ನೂ ಏಕೀಕರಿಸುತ್ತದೆ. ಕುಮಾರಸ್ವಾಮಿ ಹೇಳಿದಂತೆ "ಅದು ಕಾವ್ಯ, ಆದರೆ ವಿಜ್ಞಾನಕ್ಕಿಂತ ಭಿನ್ನವಾದದ್ದಲ್ಲ."

* * * *

೨. ವ್ಯವಸ್ಥೆಯ ಜೀವನ ದೃಷ್ಟಿ

ಹೊಸ ರೂಪಾವಳಿ

ಈ ಶತಮಾನದ ಪ್ರಾರಂಭದಲ್ಲಿ ಭೌತವಿಜ್ಞಾನದಿಂದ ತಿಳಿದುಬಂದ ಸವ್ಯದರ್ಶನ ಮತ್ತು ಈ ಉಳಿದ ಕ್ಷೇತ್ರಗಳಲ್ಲಿ ಉದಯಿಸುತ್ತಿರುವ ದರ್ಶನಗಳನ್ನು ಕುರಿತು, ನಾನು ನನ್ನ ಮೊದಲ ಉಪನ್ಯಾಸದಲ್ಲಿ ಹೇಳಿದೆ. ಲೌಕಿಕ ಜಗತ್ತು, ಇಂದಿನ ಭೌತವಿಜ್ಞಾನ ಅಭಿಪ್ರಾಯದಂತೆ, ಬಿಡಿ ಬಿಡಿಯಾದ ವಸ್ತುಗಳಿಂದ ಏರ್ಪಟ್ಟ ಯಾಂತ್ರಿಕ ವ್ಯವಸ್ಥೆ ಅಲ್ಲ, ಬದಲಿಗೆ ಅದೊಂದು ಸಂಕೀರ್ಣವಾದ ಸಂಬಂಧಗಳ ಬಲೆಯಂತೆ ಗೋಚರವಾಗುವಂತಹುದು. ಪರಮಾಣು ಉಪಪರಮಾಣುಗಳನ್ನು ಬೇರ್ಪಡಿಸಿ, ಬಿಡಿಬಿಡಿಯಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಾಗದು. ಅವುಗಳನ್ನು ಸಂಗತಿಗಳ ಬಲೆಯಲ್ಲಿ ಸಂಬಂಧಿತ ಕೊಂಡಿಗಳಂತೆ ಕಾಣಬೇಕು. ಅವು ಬಿಡಿ ಭಾಗಗಳೆಂದು ಪರಿಗಣಿಸುವ ಕಲ್ಪನೆ ಅನುಕೂಲಕರವಾಗಿರಬಹುದು. ಆದರೆ, ಅದಕ್ಕೆ ಸಮಂಜಸವಾದ ಆಧಾರವಿಲ್ಲ. ವಿಶ್ವವ್ಯಾಪಾರದಲ್ಲಿ ಈ ಎಲ್ಲ ವಸ್ತುಗಳೂ ಸಹಜವಾಗಿ ಕ್ರಿಯಾಶೀಲವಾಗಿರುವ ಅವಿಭಾಜ್ಯ ಹಂದರಗಳು. ಉಪಪರಮಾಣುಗಳು, 'ಘನವಸ್ತು' ಅಲ್ಲಿ ಅವುಗಳಿಗೆ ದ್ರವ್ಯರಾಶಿ ಇದೆ, ಅವು ಶಕ್ತಿಯ ಒಂದು ರೂಪ, ಶಕ್ತಿಯು ಯಾವಾಗಲೂ ಸಕ್ರಿಯವಾಗಿ ಚಟುವಟಿಕೆಯಿಂದ ಕೂಡಿರುತ್ತದೆ. ಶಕ್ತಿ ಚಟುವಟಿಕೆಯ ದ್ಯೋತಕ. ಉಪಪರಮಾಣುಗಳು ಶಕ್ತಿಯ ಗುಚ್ಛಗಳು ಅಥವಾ ಚಟುವಟಿಕೆಯ ಚಿತ್ತಾರಗಳು.

ಉಪಪರಮಾಣು ಜಗತ್ತಿನಲ್ಲಿನ ಶಕ್ತಿಯ ಚಿತ್ತಾರಗಳು. ಅವು ಸಮಸ್ಥಿತಿಯ ಅಣು–ಪರಮಾಣುಗಳನ್ನು ರೂಪಿಸುತ್ತವೆ. ಇವು ಒಟ್ಟಾಗಿ 'ವಸ್ತು'ವನ್ನು ಕಟ್ಟುತ್ತವೆ. ಆಗ ನಮಗೆ ಒಂದು ಬೃಹತ್ ಗಾತ್ರದ ಘನವಸ್ತು ಕಾಣುತ್ತದೆ. ಕಂಡಿದ್ದನ್ನು ನಾವು ನಂಬುತ್ತೇವೆ. ದಿನ ನಿತ್ಯದ ವ್ಯವಹಾರದಲ್ಲಿ ಇಂತಹ ಘನರೂಪದ ವಸ್ತುವಿನ ವಿಚಾರ ಉಪಯುಕ್ತವಾದುದು. ಆದರೆ, ಪರಮಾಣು ಸ್ತರದಲ್ಲಿ ಈ ಕಲ್ಪನೆ ಅರ್ಥಹೀನವಾಗುತ್ತದೆ. ಪರಮಾಣುವು ಕಣಗಳಿಂದ ರೂಪುಗೊಂಡಿದೆ. ಕಣಗಳಲ್ಲಿ ದ್ರವ್ಯದ ತಿರುಳಿಲ್ಲ. ಅವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕಾಣುವುದು ದ್ರವ್ಯದ ತಿರುಳಲ್ಲಿ ನಾವು ಕಾಣುವುದು ನಿರಂತರವಾಗಿ ವಿನ್ಯಾಸ ಚಲಿಸುತ್ತಿರುವ ಚಿತ್ತಾರಗಳನ್ನು, ಶಕ್ತಿಯ ನಿರಂತರ ನರ್ತನವನ್ನು.

ಆಧುನಿಕ ಭೌತವಿಜ್ಞಾನವು, ವನ್ಯಸಂಪತ್ತನ್ನೂ ಒಳಗೊಂಡಂತೆ, ಸಮಗ್ರ ದೃಷ್ಟಿಯಿಂದ ಜಗತ್ತನ್ನು ವೀಕ್ಷಿಸುತ್ತದೆ. ಎಲ್ಲ ಕ್ರಿಯೆಗಳಲ್ಲಿಯೂ ಮೂಲಭೂತವಾಗಿರುವ ಪರಸ್ಪರ ಅವಲಂಬನೆ ಮತ್ತು ಸಂಬಂಧಗಳನ್ನು ಒತ್ತಿ ಹೇಳುತ್ತದೆ. ಎಲ್ಲ ಸಂಗತಿಗಳಲ್ಲಿಯೂ ಸಹಜವಾದ ಚಟುವಟಿಕೆಯ ಸ್ವಭಾವವನ್ನು ಗುರುತಿಸುತ್ತದೆ. ಇಂತಹ ದೃಷ್ಟಿಯು ಪ್ರಾಚೀನ ಧಾರ್ಮಿಕ ಶ್ರದ್ಧೆಗಳಿಗೆ ಹೋಲುವುದನ್ನು, ವಿಶೇಷವಾಗಿ ಭಾರತೀಯ ಅಧ್ಯಾತ್ಮ ಚಿಂತನೆಗೆ ಹೆಚ್ಚು ಹತ್ತಿರವಾಗಿರುವುದನ್ನು, ನನ್ನ ಹಿಂದಿನ ಉಪನ್ಯಾಸದಲ್ಲಿ ಸ್ಪಷ್ಟಪಡಿಸಿದ್ದೇನೆ. ಪರಿಸರ ಪ್ರಜ್ಞೆಯ ಸಮಗ್ರ ದೃಷ್ಟಿಯನ್ನು ಜೀವಿಗಳಿಗೂ ವಿಸ್ತರಿಸಿ, ಈ ಉಪನ್ಯಾಸದಲ್ಲಿ ವಿವರಿಸಿದಾಗ ಆಧುನಿಕ ವಿಜ್ಞಾನಕ್ಕೂ ಪ್ರಾಚೀನ ಪ್ರತಿಭೆಗೂ ಇರುವ ಸಮಾನತೆಯು ಪುನಃ ಮೂಡಿಬರುತ್ತದೆ.

ವ್ಯವಸ್ಥೆಯ ಜೀವನ ದೃಷ್ಟಿ

ಆಧುನಿಕ ಭೌತವಿಜ್ಞಾನದ ಸಹಜ ವಿಸ್ತರಣೆಯೋ ಎಂಬಂತೆ, ಈ ಹತ್ತು ವರ್ಷಗಳಲ್ಲಿ ಒಂದು ಚೌಕಟ್ಟು ನಿರ್ಮಾಣವಾಯಿತು. ಇದನ್ನು ವ್ಯವಸ್ಥೆಯ 'ಸಿದ್ಧಾಂತ' ಎನ್ನಬಹುದು ಅಥವಾ ಸಾಮಾನ್ಯ ವ್ಯವಸ್ಥಾ ಸಿದ್ಧಾಂತ ಎಂದೂ ಹೇಳಬಹುದು. ಆದರೆ 'ವ್ಯವಸ್ಥಾ ಸಿದ್ಧಾಂತ' ಎಂಬ ಶೀರ್ಷಿಕೆ ದಾರಿ ತಪ್ಪಿಸುತ್ತದೆ. ಏಕೆಂದರೆ ಅದು ಸಾಪೇಕ್ಷ ಸಿದ್ಧಾಂತ ಅಥವಾ ಕ್ವಾಂಟಂ ಸಿದ್ಧಾಂತದಂತೆ ಸ್ಪಷ್ಟವಾಗಿಲ್ಲ. ಅದೊಂದು ವಿಶಿಷ್ಟವಾದ ನೋಟ ಒಂದು ಹೋಲಿಕೆ– ಒಂದು ಭಾಷೆ ಅಷ್ಟೆ.

ವ್ಯವಸ್ಥಾ ದೃಷ್ಟಿಯು ಲೋಕವನ್ನು ಸಂಬಂಧಗಳ ಮತ್ತು ಸಂಯೋಜಕ ಕೋನದಿಂದ ವೀಕ್ಷಿಸುತ್ತದೆ. ವ್ಯವಸ್ಥೆಯು ಸಮಗ್ರವಾದದ್ದು– ಅದರ ಗುಣ ಲಕ್ಷಣಗಳನ್ನು ಬಿಡಿಬಿಡಿ ಭಾಗಗಳನ್ನಾಗಿ ಮಾಡಲು ಸಾಧ್ಯವಿಲ್ಲ. ಮೂಲವಸ್ತು ಅಥವಾ ವಿನ್ಯಾಸದ ಮೂಲವನ್ನು ಗಮನಿಸುವ ಬದಲು ವ್ಯವಸ್ಥೆಯು ವ್ಯೂಹರಚನೆಯ ಮೂಲ ತತ್ವವನ್ನು ಪ್ರಮುಖವಾಗಿ ಗಮನಿಸುತ್ತದೆ. ಪ್ರಕೃತಿಯಲ್ಲಿ ವ್ಯವಸ್ಥೆಯ ಉದಾಹರಣೆಗಳು ಸಮೃದ್ಧಿಯಾಗಿವೆ. ಕಿರಿದಾದ ಏಕಾಣು ಜೀವಿಯಿಂದ ತೊಡಗಿ ಸಸ್ಯ ಪ್ರಾಣಿ ಮಾನವನವರೆಗೂ– ಎಲ್ಲವೂ ಪರಿಪೂರ್ಣವಾದ ಜೀವಂತ ವ್ಯವಸ್ಥೆ. ಕೋಶಗಳು ಜೀವಂತ. ಹಾಗೆಯೇ ವಿವಿಧ ಸ್ನಾಯು ಅಂಗಗಳು ಕೂಡ ಜೀವಂತ, ಮಾನವನ ಮಿದುಳು ಒಂದು ಸಂಕೀರ್ಣ ಉದಾಹರಣೆ. ಆದರೆ ವ್ಯವಸ್ಥೆಯು ಪ್ರತ್ಯೇಕ ಅಂಗಗಳಿಗಾಗಲೀ, ಅವುಗಳ ಬಿಡಿ ಭಾಗಗಳಿಗಾಗಲೀ ಸೀಮಿತವಾಗಿಲ್ಲ. ಇದೇ ರೀತಿಯ ಪರಿಪೂರ್ಣತೆ ಸಾಮಾಜಿಕ ವ್ಯವಸ್ಥೆಯಲ್ಲಿಯೂ ಕಾಣುತ್ತದೆ– ಕುಟುಂಬ ದಲ್ಲಿರಬಹುದು, ಪಂಗಡಗಳಲ್ಲಿರಬಹುದು ಮತ್ತು ವಿವಿಧ ಅಂಗಗಳ ಮತ್ತು ನಿರ್ಜೀವ ವಸ್ತುಗಳ ಪರಸ್ಪರ ಪ್ರಕ್ರಿಯೆಯುಳ್ಳ ಜೀವಿ ಪರಿಸ್ಥಿತಿಯಲ್ಲಿಯೂ ಕೂಡ ಕಂಡುಬರುತ್ತದೆ.

ಈ ಎಲ್ಲ ಸ್ವಾಭಾವಿಕವಾದ ವ್ಯವಸ್ಥೆಗಳೂ ಪರಿಪೂರ್ಣವಾಗಿದ್ದು, ಅವುಗಳ ಅಂಗಭಾಗಗಳ ಪರಸ್ಪರ ಕ್ರಿಯೆ ಮತ್ತು ಅವಲಂಬನೆಗಳಿಂದ ನಿರ್ದಿಷ್ಟ ರೂಪವನ್ನು ಪಡೆದಿರುತ್ತದೆ. ವ್ಯವಸ್ಥೆಯನ್ನು ತಾತ್ವಿಕವಾಗಿಯಾಗಲೀ, ಭೌತಿಕವಾಗಿಯಾಗಲೀ ಬಿಡಿಭಾಗಗಳಾಗಿ ಛೇದಿಸಿದಾಗ ಅದರ ಗುಣ ವಿಶೇಷಗಳು ನಾಶವಾಗುತ್ತವೆ. ವ್ಯವಸ್ಥೆಯ ಭಾಗಗಳನ್ನು ಸೂಕ್ಷ್ಮವಾಗಿ ಗಮನಿಸಬಹುದಾದರೂ, ಇಡೀ ರಚನೆಯ ಸ್ವಭಾವವು, ಬಿಡಿಭಾಗಗಳ ಒಟ್ಟು ಸ್ವಭಾವಕ್ಕಿಂತ ಭಿನ್ನವಾಗಿರುತ್ತದೆ.

ವ್ಯವಸ್ಥೆಯ ಮತ್ತೊಂದು ಮುಖ, ಅದರ ಸಹಜ ಚಟುವಟಿಕೆ. ಅದರ ರಚನೆ ಗಟ್ಟಿಯಾಗಿರುವುದಿಲ್ಲ. ಆದರೂ ಓಲಾಡುತ್ತಿದ್ದರೂ ದೃಢವಾಗಿದ್ದು, ಅದರ ಕಾರ್ಯಗತಿಯನ್ನು ಸ್ಪಷ್ಟಪಡಿಸುತ್ತದೆ. ವ್ಯವಸ್ಥೆಯ ಚಿಂತನೆಯೇ ಕಾರ್ಯಚಿಂತನೆ; ರೂಪವು ಕಾರ್ಯದ ಜೊತೆಗೂಡಿರುತ್ತದೆ. ಅಂತರ್‌ಸಂಬಂಧವು ಅಂತರ್ ಕ್ರಿಯೆಯೊಂದಿಗೆ; ತೂಗಾಡುತ್ತಲೇ ವಿರೋಧಗಳು ಐಕ್ಯವಾಗುತ್ತವೆ. ಇಟ್ಟಿಗೆ ರಾಶಿಯ ಅನುಕ್ರಮ ಜೋಡಣೆಗಿಂತ, ಅಥವಾ ಕರಾರುವಾಕ್ಕಾಗಿ ಅಳತೆ ಮಾಡಿ ಜೋಡಿಸಿದ ಯಂತ್ರಕ್ಕಿಂತ, ಜೀವರಾಶಿಯ ಚಿತ್ತಾರಗಳು ಮೂಲದಲ್ಲಿಯೇ ಭಿನ್ನವಾಗಿರುತ್ತವೆ. ಆದರೂ ಇಂತಹ ಜೋಡಣೆಗಳೂ ಜೀವವ್ಯವಸ್ಥೆಯಲ್ಲಿ ನಡೆಯುತ್ತವೆ ಎಂದು ಅರಿತುಕೊಳ್ಳುವುದು ಮುಖ್ಯ. ಆದರೂ ಜೀವ ಜಗತ್ತಿನಲ್ಲಿಯೂ ಇಂತಹ ಯಾಂತ್ರಿಕ ಕ್ರಿಯೆಗಳು ವಿಶಿಷ್ಟವಾಗಿಯೂ, ಅನುಷಂಗಿಕವಾಗಿಯೂ ನಡೆಯುತ್ತವೆ. ಅದರಿಂದಲೇ ಅಂಗಭಾಗಗಳನ್ನು ಬಿಡಿಯಾಗಿ ವಿವರಿಸುವುದು ಅನುಕೂಲವಾಗಿ ಕಾಣುತ್ತವೆ. ಒಮ್ಮೊಮ್ಮೆ ಅವಶ್ಯಕವೂ ಆಗುತ್ತದೆ. ಆದರೆ ಅದೇ ಸಂಪೂರ್ಣ ವಿವರಣೆ ಎಂದಾಗ ಅಪಾಯಕಾರಿಯಾಗುತ್ತದೆ. ಛಿದ್ರತೆ–ಸಮಗ್ರತೆ ಮತ್ತು ವಿಶ್ಲೇಷಣೆ–ಸಂಯೋಜನೆಗಳು ಪರಸ್ಪರ ಪೂರಕವಾದ ನೋಟಗಳು, ಯುಕ್ತ ತುಲನೆಯಿಂದ ಬಳಸಿಕೊಂಡರೆ ಜೀವನದ ಬಗೆಗೆ ಆಳವಾದ ಜ್ಞಾನ ಪಡೆಯಲು ಸಹಕಾರಿಯಾಗುತ್ತದೆ.

ವ್ಯವಸ್ಥೆಯೊಳಗೇ ಬಹುಸ್ತರ ವ್ಯವಸ್ಥೆಗಳ ರಚನೆಯನ್ನೂ ರೂಪಿಸುವುದು ಜೈವಿಕ ವ್ಯವಸ್ಥೆಯ ಪ್ರವೃತ್ತಿ– ಮುಖ್ಯವಾದ ದರ್ಶನ. ಮಾನವ ದೇಹವು ಹಲವು ಅಂಗಗಳನ್ನೊಳಗೊಂಡಿದೆ– ಪ್ರತಿ ಅಂಗವೂ ಸ್ನಾಯುಗಳಿಂದ ಕೂಡಿದೆ, ಸ್ನಾಯುಗಳು ಕೋಶಗಳಿಂದ ಏರ್ಪಟ್ಟಿವೆ. ಇವೆಲ್ಲವೂ ಜೀವಿಯ ಅಂಗಭಾಗಗಳು ಅಥವಾ ಜೀವಿತ ವ್ಯವಸ್ಥೆ ಚಿಕ್ಕ ಭಾಗಗಳಿಂದ ಏರ್ಪಟ್ಟಿದ್ದರೂ ಒಂದು ಸಮಗ್ರ ಬೃಹತ್ತಿನ ಭಾಗಗಳಂತೆ ವರ್ತಿಸುತ್ತವೆ. ಜೀವ ಜಗತ್ತು ನಿಶ್ಚಿತ ನಿಯಮಕ್ಕೆ ಬಳಸಲ್ಪಟ್ಟಂತೆ ವರ್ತಿಸುತ್ತದೆ. ಪ್ರತಿ ಸ್ತರದಲ್ಲಿಯೂ ಪರಸ್ಪರ ಸಂಬಂಧ, ಅವಲಂಬನೆ ಕಾಣುತ್ತದೆ. ಪ್ರತಿಯೊಂದು ಸ್ಥರದಲ್ಲಿಯೂ ಪರಿಸರದೊಂದಿಗೆ ಅವು ವ್ಯವಹರಿಸುವುದೂ, ಅಂತರ್ ಕ್ರಿಯೆಗಳಲ್ಲಿ ತೊಡಗುವುದೂ ಕಾಣುತ್ತವೆ.

ಸ್ವ–ಸಂಘಟನೆ

ವ್ಯವಸ್ಥೆಯ ದೃಷ್ಟಿ ಪರಿಸರ ಪರವಾಗಿರುವುದು ಸರಿಯಷ್ಟೆ. ಆಧುನಿಕ ಭೌತವಿಜ್ಞಾನದಂತೆ, ಅದೂ ಕೂಡ, ಎಲ್ಲ ಸಂಗತಿಗಳಲ್ಲಿಯೂ ಪರಸ್ಪರ ಸಂಬಂಧ ಮತ್ತು ಅವಲಂಬನೆಗೆ ಮತ್ತು ಜೀವವ್ಯವಸ್ಥೆಯ ಚಟುವಟಿಕೆಗೆ ಒತ್ತು ನೀಡುತ್ತದೆ. ಎಲ್ಲ ರಚನೆಗಳೂ ಕಾರ್ಯಗತಿಯ ಅಭಿವ್ಯಕ್ತಿ ಮತ್ತು ಜೀವ ವ್ಯವಸ್ಥೆಗಳು ಸಂಘಟನೆಯ ರೂಪಗಳೆಂದು ವಿವರಿಸುತ್ತದೆ.

ಸಂಘಟನೆಯ ಯಾವ ರಚನೆಗಳಲ್ಲಿ ಜೀವಲಕ್ಷಣವಿರಬಹುದು? ಅವು ಸ್ವ–ಸಂಘಟನೆಯ ತತ್ವ ಎಂಬ ಒಂದೇ ತತ್ವದ ವಿಭಿನ್ನ ಮುಖಗಳಂತೆ ಕಾಣುವ ವಿವಿಧ ಕಾರ್ಯನೀತಿ ಮತ್ತು ಸಂಗತಿಗಳನ್ನು ಒಳಗೊಂಡಿರುತ್ತವೆ. ಒಂದು ಜೀವಂತ ಘಟಕವು ಸ್ವಯಂ ಸಂಘಟನಾಶಿಸ್ತಿಗೆ ಒಳಪಟ್ಟಿರುತ್ತದೆ. ಅದರ ವ್ಯವಸ್ಥೆಯಾಗಲೀ, ಕೆಲಸವಾಗಲೀ, ಹೊರಗಿನ ವಾತಾವರಣದ ಪ್ರಭಾವಕ್ಕೆ ಒಳಗಾಗದೇ ತನ್ನದೇ ವ್ಯವಸ್ಥೆಯನ್ನು ರೂಢಿಸಿಕೊಂಡಿರುತ್ತದೆ. ಸ್ವಯಂ ಸಂಘಟಿತ ವ್ಯವಸ್ಥೆಯು ಒಂದು ರೀತಿಯಲ್ಲಿ ಸ್ವತಂತ್ರವಾದುದು. ಉದಾಹರಣೆಗೆ, ಪರಿಸರದ ಪ್ರಭಾವಕ್ಕೆ ಒಳಗಾಗದೇ ತಮ್ಮ ಗಾತ್ರವನ್ನು, ತಮ್ಮ ಆಂತರಿಕ ಗುಣಕ್ಕನುಗುಣವಾಗಿ ನಿರ್ಧರಿಸಿಕೊಳ್ಳುತ್ತವೆ. ಹಾಗೆಂದು ಜೀವಗಳು ಪರಿಸರದಿಂದ ಬೇರೆಯಾಗಿ ಬದುಕುತ್ತಿವೆ ಎಂಬರ್ಥವಲ್ಲ. ಬದಲಿಗೆ ಅವು ನಿರಂತರವಾಗಿ ಪರಿಸರದೊಂದಿಗೆ ಪ್ರತಿಕ್ರಿಯಿಸುತ್ತಿರುತ್ತವೆ. ಈ ಪ್ರತಿಕ್ರಿಯೆ ಸಂಘಟನೆಯನ್ನು ಪ್ರೇರೇಪಿಸುವುದಿಲ್ಲ.

ಸ್ವಯಂ ಸಂಘಟಿತ ವ್ಯವಸ್ಥೆಯ ಈ ತರಹದ ಸ್ವಾತಂತ್ರ್ಯವು ಸ್ವತಂತ್ರ ಸಂಕಲ್ಪವನ್ನು ಕುರಿತ ಪ್ರಾಚೀನ ದಾರ್ಶನಿಕ ಪ್ರಶ್ನೆಯ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ. ವ್ಯವಸ್ಥೆಯ ದೃಷ್ಟಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಕಲ್ಪಗಳು ಪರಸ್ಪರ ಸಂಬಂಧವುಳ್ಳ ಪರಿಕಲ್ಪನೆಗಳು. ಒಂದು ದೃಷ್ಟಿಯಲ್ಲಿ ವಾತಾವರಣದಿಂದ ಪ್ರಭಾವಿತವಾಗಿಲ್ಲ ಎಂದಾಗ ವ್ಯವಸ್ಥೆಯು ಮುಕ್ತ; ಅದು ನಿರಂತರವಾದ ಪ್ರತಿಕ್ರಿಯೆಗಳ ಮೂಲಕ ವಾತಾವರಣವನ್ನು ಅವಲಂಬಿಸಿದೆ ಎಂದಾಗ, ಅದರ ಚಟುವಟಿಕೆಯು ಪರಿಸರದ ಪ್ರಭಾವಕ್ಕೆ ಒಳಪಟ್ಟಿರುತ್ತದೆ. ವ್ಯವಸ್ಥೆಯ ಸ್ವಾತಂತ್ರ್ಯವು ಅದರ ಸಂಕೀರ್ಣತೆಯನ್ನು ಅವಲಂಬಿಸಿರುತ್ತದೆ. ಅದು ಮಾನವ ಜೀವಿಯ ವ್ಯವಸ್ಥೆಯಲ್ಲಿ ಪರಾಕಾಷ್ಠತೆಯನ್ನು ತಲುಪುತ್ತದೆ.

'ಸ್ವತಂತ್ರ ಸಂಕಲ್ಪದ' ಇಂತಹ ಪರಿಕಲ್ಪನೆಯು, ಧಾರ್ಮಿಕ ಶ್ರದ್ಧೆಯು ತನ್ನ ಅನುಯಾಯಿಗಳಿಗೆ ಸ್ವಾರ್ಥವನ್ನು ಮೀರಿ ನಿಲ್ಲುವಂತೆ ಪ್ರೇರೇಪಿಸುವ ದೃಷ್ಟಿಗೆ, ಉತ್ತಮವಾಗಿ ಹೊಂದಾಣಿಕೆಯಾಗುತ್ತದೆ ಮತ್ತು ನಾವು ಯಾವ ವಿಶ್ವದ ಭಾಗವೋ ಅದರಿಂದ ಬೇರೆಯಾಗಿರಲಾರೆವು ಎಂದು ಎಚ್ಚರಿಸುತ್ತದೆ. ನಮ್ಮ

ಅಹಂನ್ನು ಬಿಟ್ಟು ವಿಶ್ವದ ಅಖಂಡತೆಯಲ್ಲಿ ಲೀನವಾಗುವುದೇ ಈ ಶ್ರದ್ಧೆಯ ಗುರಿ. ಅಂತಹ ಸ್ಥಿತಿಯನ್ನು ತಲುಪಿದ ಮೇಲೆ 'ಸ್ವತಂತ್ರ ಸಂಕಲ್ಪ ಶಕ್ತಿ'ಯು ಅರ್ಥ ಕಳೆದುಕೊಳ್ಳುತ್ತದೆ. 'ನಾನೇ' ವಿಶ್ವವಾದರೆ, ಆಗ 'ಬಾಹ್ಯ', ಪ್ರಭಾವ ಇರದು. ನನ್ನ ಕಾರ್ಯಗಳೆಲ್ಲ ಸ್ವಯಂಪ್ರೇರಿತ ಮತ್ತು ಮುಕ್ತ. ಟಿಬೆಟ್ಟಿನ ಬೌದ್ಧ ಲಾಮ ಗೋವಿಂದ ಹೇಳುವಂತೆ;

'ಜ್ಞಾನಿಯಾದವನಿಗೆ...... ಯಾರ ಪ್ರಜ್ಞೆಯು ವಿಶ್ವವನ್ನು ತುಂಬಿಕೊಂಡಿದೆಯೋ... ಅವನಿಗೆ ವಿಶ್ವವೇ 'ಶರೀರ'ವಾಗುತ್ತದೆ. ಅವನ ಭೌತಿಕ ಶರೀರವು ವಿಶ್ವ ಪ್ರಜ್ಞೆಯ ಪ್ರತೀಕವಾಗುತ್ತದೆ. ಅವನ ಅಂತಃದರ್ಶನವು ಅಂತಿಮ ಸತ್ಯವನ್ನು ವ್ಯಕ್ತಪಡಿಸುತ್ತದೆ. ಅವನ ಮಾತು ಪರಮ ಸತ್ಯದ ಅಭಿವ್ಯಕ್ತಿಯಾಗುತ್ತದೆ, ಮಾಂತ್ರಿಕ ಶಕ್ತಿಯಾಗುತ್ತದೆ."

ಸತ್ಯದ ವೈಚಾರಿಕ ವಿವರಣೆಗಳಲ್ಲಿನ ಇತರ ಪರಿಕಲ್ಪನೆಗಳಂತೆ, ಧಾರ್ಮಿಕ ದೃಷ್ಟಿಯಲ್ಲಿಯೂ, "ಸ್ವತಂತ್ರ ಸಂಕಲ್ಪ"ವು ತುಲನಾತ್ಮಕವಾದುದು, ಮಿತಿಯುಳ್ಳದ್ದು ಮತ್ತು ಭ್ರಾಮಕ ಕೂಡ.

ಸ್ವ–ಸಂಘಟನೆ–ಸ್ವಾನುಭವ ದರ್ಶನ

ಸ್ವ–ಸಂಘಟಿತ ವ್ಯವಸ್ಥೆಯ ತತ್ವವನ್ನು ಕುರಿತು, ಕಳೆದ ದಶಕದಿಂದ, ಬೆಲ್ಜಿಯಂನ ನೊಬೆಲ್ ಬಹುಮಾನಿತ ಇಲ್ಯ–ಪ್ರಿಗೋಗಿನೆಯ ನೇತೃತ್ವದಲ್ಲಿ, ಹಲವಾರು ಸಂಶೋಧಕರು ಕೆಲಸ ಮಾಡಿದ್ದಾರೆ. ನಿರಂತರವಾಗಿ ಕೆಲಸ ಮಾಡುತ್ತಲೇ ಇರುವುದು ಇಂತಹ ಸ್ವ–ಸಂಘಟಿತ ವ್ಯವಸ್ಥೆಯ ಪ್ರಮುಖ ಲಕ್ಷಣ. ಜೀವಂತವಾಗಿರಬೇಕಾದರೆ, ಅವು ನಿರಂತರವಾಗಿ ವಾತಾವರಣದೊಂದಿಗೆ ಶಕ್ತಿ–ದ್ರವ್ಯಗಳನ್ನು ವಿನಿಮಯ ಮಾಡಿಕೊಳ್ಳುತ್ತಲೇ ಇರಬೇಕು. ಈ ವಿನಿಮಯ ಕ್ರಿಯೆಯಲ್ಲಿ, ಆಹಾರವನ್ನು ತೆಗೆದುಕೊಳ್ಳುವುದು, ವಿಭಜಿಸಿಕೊಳ್ಳುವುದು, ಅದರ ಕೆಲವಂಶಗಳನ್ನು ಸಂರಕ್ಷಣೆ ಅಥವಾ ಬೆಳವಣಿಗೆಗೆ ಉಪಯೋಗಿಸುವುದು, ಇಂತಹವೂ ಒಳಗೊಂಡಿರುತ್ತವೆ, ಇದನ್ನೇ ಜೈವಿಕ ಕ್ರಿಯೆ ಎನ್ನಬಹುದು.

ಸ್ವಯಂ ನವೀಕರಣ, ಜೀವಿಯ ನಿರಂತರ ಕ್ರಿಯೆಯ ಮತ್ತೊಂದು ಮುಖ್ಯ ಅಂಶ. ಜೀವಿಯ ಪ್ರತಿಯೊಂದು ಅಂಗವೂ ನಿರಂತರವಾಗಿ ವಿಭಜನೆಯಾಗುತ್ತಾ, ಪುನಃ ನಿರ್ಮಾಣವಾಗುತ್ತ, ಕೋಶಗಳು ಸ್ನಾಯುಗಳು ಪುನಃ ಪುನಃ ರಚನೆಯಾಗುತ್ತ, ತಿರುಗಿ ಸ್ಥಾಪನೆಯಾಗುತ್ತಲೇ ಇರುತ್ತವೆ. ನಿರಂತರವಾಗಿ ಬದಲಾವಣೆಯಾಗುತ್ತಿದ್ದರೂ ಜೀವಿಯ ಸ್ಥಳ ರಚನೆ, ಚಹರೆಗಳು ಬದಲಾಗದು. ಅದರ ವಿಭಾಗಗಳು ನಿರಂತರ ಬದಲಾವಣೆಗೆ ಒಳಪಟ್ಟರೂ ಜೀವಿಯ ಸ್ವರೂಪವು ಸ್ಥಿರವಾಗಿರುತ್ತದೆ.

ಸ್ವಯಂ ನವೀಕರಣಕ್ಕೆ ಸಂಬಂಧಪಟ್ಟಂತೆ, ಸ್ವ–ಸಂಘಟನೆ ಇತರ ಅಂಶಗಳೆಂದರೆ ಸ್ವದುರಸ್ಥಿ, ಸುಧಾರಣೆ ಮತ್ತು ಪರಿಸರದ ಬದಲಾವಣೆಗಳಿಗೆ ಹೊಂದಿಕೊಳ್ಳುವುದು.

ಸ್ವಯಂ ನವೀಕರಣದ ವಿವಿಧ ಹಂತಗಳು, ಸಾವನ್ನು ಕುರಿತು, ಸರಿಯಾದ ದೃಷ್ಟಿಯನ್ನು ನಮಗೆ ಒದಗಿಸುತ್ತದೆ. ಸ್ವಯಂ ನವೀಕರಣ ರಚನೆಯ ವಿಭಜನೆ ಮತ್ತು ನಿರ್ಮಾಣದ ನಿರಂತರ ಚಕ್ರ ಜೀವಿಯ ಆವಶ್ಯಕವಾದ ಅಂಶ. ಹಾಗೆ ನಿರಂತರವಾಗಿ ಪುನರ್ ಸ್ಥಾಪಿತವಾಗುವ ರಚನೆಯೇ ಜೀವಂತ ಭಾಗ. ಅವರ ದೃಷ್ಟಿಯಲ್ಲಿ ಬೃಹತ್ ವ್ಯವಸ್ಥೆಯ ಸ್ವಯಂ ನವೀಕರಣವೇ ಅವುಗಳ ಹುಟ್ಟು–ಸಾವಿನ ಚಕ್ರ. ಆದ್ದರಿಂದ ಹುಟ್ಟುಸಾವು ಎಂಬುದು ಸ್ವ–ಸಂಘಟನೆಯ ಕೇಂದ್ರ–ಜೀವನದ ತಿರುಳು. ಸಾವು ಹುಟ್ಟಿನ ವೈರಿ ಅಲ್ಲ, ಅವಶ್ಯವಾದ ಸ್ಥಿತಿ. ಈ ದೃಷ್ಟಿಗೂ, ಹುಟ್ಟುಸಾವುಗಳು ಅಂತ್ಯವಿಲ್ಲದ ಚಕ್ರದಲ್ಲಿನ ಸ್ಥಿತಿಗಳು ಜೀವನವು ನಿರಂತರವಾದ ಸ್ವಯಂ ನವೀಕರಣದ ಲೀಲೆ ಎಂದು ಸಾರುವ ಪೌರಾತ್ಯರ ಪರಂಪರೆಯ ದೃಷ್ಟಿಗೂ ಸಂಪೂರ್ಣ ಸಾಮರಸ್ಯ ಕಾಣುತ್ತವೆ.

ನಾನು ಇದುವರೆಗೆ ವಿವರಿಸಿದ ಸ್ವ–ಸಂಘಟನೆಯ ವಿಚಾರಗಳನ್ನು ಸ್ವ–ಸಂರಕ್ಷಣೆಯ ಕಾರ್ಯವಿಧಾನ ಎಂದು ಕಾಣಬಹುದು. ಜೀವಿಗಳು ತಮ್ಮ ಸಂರಕ್ಷಣೆಯ ಜೊತೆಗೆ, ತಮ್ಮ ಕ್ರಿಯಾಶೀಲತೆಯನ್ನೂ ಕಾಪಾಡಿಕೊಂಡು ತಮ್ಮ ಇತಿಮಿತಿಗಳನ್ನು ಮೀರಿ ಬೆಳೆಯುವ, ಹೊಸದನ್ನು ಕಾಣುವ ಪ್ರವೃತ್ತಿಯನ್ನು ಅರ್ಥಮಾಡಿಕೊಳ್ಳುವುದು ಸ್ವಲ್ಪ ಕಷ್ಟ. ಈ ಸ್ವಾನುಭವ ದರ್ಶನ ಅಥವಾ ಬೆಳವಣಿಗೆಯು, ಅನುಭವ, ಕಲಿಕೆ, ಬೆಳವಣಿಗೆ ಮತ್ತು ವಿಕಸನದಲ್ಲಿ ವ್ಯಕ್ತವಾಗುತ್ತದೆ.

ವ್ಯವಸ್ಥೆಯ ದೃಷ್ಟಿಯಿಂದ ಡಾರ್ವಿನ್ನನ ವಿಕಾಸವಾದವು ವಿಕಸನವನ್ನು ಅರ್ಥಮಾಡಿಕೊಳ್ಳಲು ಅವಶ್ಯವಾದ, ಎರಡು ಪರಸ್ಪರ ಪೂರಕವಾದ ಅಂಶಗಳಲ್ಲಿ ಒಂದು. ಮತ್ತೊಂದು ದೃಷ್ಟಿಯು, ವಿಕಸನವನ್ನು, ಸ್ವ–ಸಂಘಟನೆಯ ಸಾರದ ವ್ಯಕ್ತರೂಪ ಎನ್ನುತ್ತದೆ. ಇದು ಕಾಲ ಸರಿದಂತೆ ಸಂಕೀರ್ಣತೆಯನ್ನು ಬಚ್ಚಿಡಲು ತೊಡಗುತ್ತದೆ.

ಮನಸ್ಸಿನ ಒಂದು ಹೊಸ ಪರಿಕಲ್ಪನೆ

ವ್ಯವಸ್ಥೆಯ ದೃಷ್ಟಿಯನ್ನು ಜೀವಿಗಳಿಗೆ, ಮುಖ್ಯವಾಗಿ ಮಾನವ ಜೀವಿಗಳಿಗೆ ಅನ್ವಯಿಸಬೇಕಾದರೆ, ಮನಸ್ಸನ್ನು ಕುರಿತು ಹೇಳಬೇಕಾಗುವುದು ಅಗತ್ಯ. ಮಾನವ ಶಾಸ್ತ್ರಜ್ಞ ಹಾಗೂ ವ್ಯವಸ್ಥಾಕತ್ವ ಪ್ರತಿಪಾದಕ, ಗ್ರೆಗೋರಿ ಬೇಟ್ಸನ್‌ನ ಅಭಿಪ್ರಾಯದಲ್ಲಿ, 'ಮನಸ್ಸು' ಎಂಬುದು ಜೀವ ಸಂಕುಲದ, ಸಮಾಜದ, ಪರಿಸರದ ಒಂದು ವಿಶಿಷ್ಟವಾದ ವ್ಯವಸ್ಥೆ. ಅವನು, 'ಮನಸ್ಸು' ಮೂಡಬೇಕಾದರೆ ವ್ಯವಸ್ಥೆಯು ಕೆಲವು ಲಕ್ಷಣಗಳನ್ನು

ಹೊಂದಿರಬೇಕೆಂದು, ಲಕ್ಷಣಗಳ ಒಂದು ಪಟ್ಟಿಯನ್ನೇ ಕೊಡುತ್ತಾನೆ. ಆ ಲಕ್ಷಣಗಳನ್ನು ಹೊಂದಿರುವ ವ್ಯವಸ್ಥೆ ಮಾಹಿತಿಗಳನ್ನು ಸಂಸ್ಕರಿಸಲು, ಹಲವಾರು ಸಂಗತಿಗಳನ್ನು ವೃದ್ಧಿಪಡಿಸಲು, ಮನಸ್ಸಿಗೆ ಸಂಬಂಧಪಟ್ಟಂತೆ ಚಿಂತಿಸಲು, ಕಲಿಯಲು, ನೆನಪಿಡಲು ಸಾಧ್ಯವಾಗುತ್ತದೆ. ಬೇಟ್ಸನ್‌ನ ದೃಷ್ಟಿಯಲ್ಲಿ 'ಮನಸ್ಸು' ಎಂಬುದು ಒಂದು ಸಂಕೀರ್ಣತೆಯ ಅವಶ್ಯವಾದ ಹಾಗೂ ಅನಿವಾರ್ಯವಾದ ಫಲ. ಅದು ಜೀವ ಸಂಕುರದ ಮಿದುಳು ಮತ್ತು ಪ್ರಧಾನ ನರಮಂಡಲಗಳು ರೂಪುಗೊಳ್ಳುವ ಮೊದಲೇ ರೂಪ ತಳೆಯುತ್ತದೆ.

ಮನಸ್ಸನ್ನು ಕುರಿತು ಬೇಟ್ಸನ್ ಕೊಡುವ ಲಕ್ಷಣಗಳಿಗೆ ಸ್ವ–ಸಂಘಟಿತ ವ್ಯವಸ್ಥೆಯ ವಿಶಿಷ್ಟ ಲಕ್ಷಣಗಳು ಬಹಳ ಹತ್ತಿರವಾಗಿವೆ. ಮನಸ್ಸು ಜೀವಿಯ ಅವಶ್ಯ ಗುಣ. ವ್ಯವಸ್ಥೆಯ ದೃಷ್ಟಿಯಲ್ಲಿ ಜೀವನ ಒಂದು 'ಪದಾರ್ಥ' ಅಥವಾ 'ಬಲ' ಅಲ್ಲ. ಅಂತೆಯೇ ಮನಸ್ಸು ವಸ್ತುವಿನೊಡನೆ ಪ್ರತಿಕ್ರಿಯೆಯಲ್ಲಿಯೂ ತೊಡಗುವುದಿಲ್ಲ. ಮನಸ್ಸು–ಜೀವ ಎರಡೂ ಒಂದೇ ದೇಹದ ಪ್ರಕಟಣೆಗಳು. ಸ್ವಸಂಘಟನೆಯ ಚಟುವಟಿಕೆಯನ್ನು ಪ್ರತಿನಿಧಿಸುವ ಪ್ರಕ್ರಿಯೆ.

ಕಾರ್ಟೀಸಿಯನ್ ಕಂದಕವನ್ನು ದಾಟಲು, ಪಾಶ್ಚಾತ್ಯ ವಿಜ್ಞಾನಕ್ಕೆ 'ಮನಸ್ಸಿ'ನ ಈ ಹೊಸಪರಿಕಲ್ಪನೆ ಒಂದು ಮಹತ್ವದ ಕೊಡುಗೆ. ಮನಸ್ಸು ಮತ್ತು ವಸ್ತುವು ಬೇರೆ ಬೇರೆಯಲ್ಲ. ಒಂದೇ ಸಂಗತಿಯ ಬೇರೆ ಬೇರೆ ಮುಖಗಳು. ಡೆಕಾರ್ಟೆ ಕಾಲದಿಂದ ಮಿದುಳಿಗೂ ಮನಸ್ಸಿಗೂ ನಡುವಿನ ಗೊಂದಲ ನಿವಾರಣೆಯಾಗುತ್ತದೆ. ಮನಸ್ಸು ಸ್ವಸಂಘಟನೆಯ ಚಟುವಟಿಕೆಯಾದರೆ, ಮಿದುಳು ಈ ಚಟುವಟಿಕೆಯನ್ನು ನಡೆಸುವ ಜೈವಿಕ ರಚನೆ.

ಮನಸ್ಸನ್ನು ಕುರಿತ ಬೇಟ್ಸನ್‌ನ ಪರಿಕಲ್ಪನೆಯನ್ನು ಅನುಸರಿಸಿ, ಆದರೂ ಸ್ವಲ್ಪ ಭಿನ್ನವಾಗಿ ನಾನದನ್ನು ಹೇಳುತ್ತೇನೆ. ಮನಸ್ಸು ಅತ್ಯಂತ ಸಂಕೀರ್ಣ ಅಂಗ ಎಂದು ಹೇಳುತ್ತಾ, ಸ್ವಲ್ಪ ಕೆಳಸ್ತರದ ಬೌದ್ಧಿಕ ಚಟುವಟಿಕೆಗೆ ಒಂದು ಹೊಸ ಪದವನ್ನು (ಮೆಂಟೇಶನ್), – ಮನಸ್ಸಿನ ವ್ಯಾಪಾರ – ಬಳಸುತ್ತೇನೆ. ಪ್ರತಿಯೊಂದು ಜೀವಿಯೂ, ಒಂದು ಕೋಶ, ಒಂದು ಸ್ನಾಯು, ಒಂದು ಜೈವಿಕ ಅಂಗ–ಇತ್ಯಾದಿಗಳೆಲ್ಲವೂ ಮನಸ್ಸಿನ ವ್ಯಾಪಾರದಲ್ಲಿ ತೊಡಗಿರುತ್ತವೆ. ಆದರೆ ಉನ್ನತ ಜೀವಿಗಳಲ್ಲಿ ಮನಸ್ಸಿನ ವೈಶಿಷ್ಟ್ಯವಾದ ಆಂತರಿಕ ಜಗತ್ತು ಬಿಚ್ಚಿಕೊಳ್ಳುತ್ತದೆ. ಅದರಲ್ಲಿ ಸ್ವಪ್ರಜ್ಞೆ, ಜಾಗತಿಕ ಅನುಭವ, ಭಾವನಾತ್ಮಕ ಚಿಂತನೆ, ಸಾಂಕೇತಿಕ ಭಾಷೆ ಇತ್ಯಾದಿ ಸೇರಿವೆ. ಇವುಗಳಲ್ಲಿ ಬಹಳಷ್ಟು ಲಕ್ಷಣಗಳು ಇತರ ಪ್ರಾಣಿಗಳಲ್ಲಿ ಅಪೂರ್ಣಾವಸ್ಥೆ ಯಲ್ಲಿದ್ದು, ಮಾನವನಲ್ಲಿ ಪೂರ್ಣವಾಗಿ ಕಾಣಿಸಿಕೊಳ್ಳುತ್ತದೆ.

ಜೈವಿಕ ಜಗತ್ತು ಬಹುಸ್ತರ ರಚನೆಗಳಲ್ಲಿ ಸಂಘಟಿಸಿವೆ ಎಂದಾಗ, ಅಲ್ಲಿ ಮನಸ್ಸಿಗೂ ವಿವಿಧ ಸ್ತರಗಳಿವೆ ಎಂದರ್ಥವಾಗುತ್ತದೆ. ಉದಾ: ಮನುಷ್ಯನಲ್ಲಿ

ನಡೆಯುವ "ಪದಾರ್ಥವಿಭಜನೆ" (ಮೆಟಿಬಾಲಿಕ್) ಎಂಬ ವ್ಯವಹಾರದಲ್ಲಿಯೂ ಕೋಶ, ಸ್ನಾಯು– ಇತ್ಯಾದಿಗಳನ್ನೊಳಗೊಂಡ ವಿವಿಧ ಸ್ತರಗಳಿವೆ. ಮತ್ತು ಮಿದುಳಿನ ನರವ್ಯೂಹದಲ್ಲಿಯೂ ವಿಕಸನಕ್ಕೆ ಸಂಬಂಧಪಟ್ಟಂತೆ ವಿವಿಧ ಸ್ತರಗಳಿವೆ. ಮತ್ತು ಮಿದುಳಿನ ನರವ್ಯೂಹದಲ್ಲಿಯೂ ವಿಕಸನಕ್ಕೆ ಸಂಬಂಧಪಟ್ಟಂತೆ ವಿವಿಧ ಸ್ತರಗಳಿವೆ. ಮನಸ್ಸಿನ ಈ ಎಲ್ಲ ವ್ಯಾಪಾರಗಳ ಒಟ್ಟು ಮೊತ್ತವೇ 'ಮಾನವ ಮನಸ್ಸು' ಅಥವಾ ಚೈತನ್ಯ. ಪ್ರಕೃತಿಯ ಈ ಸ್ತರ ರಚನಾ ಕ್ರಮದಲ್ಲಿ ಒಬ್ಬೊಬ್ಬ ಮನುಷ್ಯನ ಮನಸ್ಸೂ, ಬೃಹತ್ತಾದ ಸಮಾಜ, ಪರಿಸರದಲ್ಲಿ ಸೇರಿಹೋಗುತ್ತದೆ. ಇವು ಒಟ್ಟುಗೂಡಿ ತಾರಾಸಮೂಹದ ಮನೋನಂದನದಲ್ಲಿ ಲೀನವಾಗಿ, ವಿಶ್ವಚೈತನ್ಯದಲ್ಲಿ ಒಂದಾಗುತ್ತದೆ.

ಮನಸ್ಸನ್ನು ಕುರಿತ ಈ ದೃಷ್ಟಿಯು ಧಾರ್ಮಿಕ ಆಚರಣೆಯ ದೃಷ್ಟಿಗೆ ಅತಿ ಹತ್ತಿರವಾಗಿರುವಂತೆ ಕಾಣುತ್ತದೆ. ಸ್ತರರಚನಾಕ್ರಮದ ಪರಿಕಲ್ಪನೆಯು ಹಲವಾರು ಆಚರಣೆಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಆಧುನಿಕ ವಿಜ್ಞಾನದಲ್ಲಿ ಇದು ವಾಸ್ತವದ ವಿವಿಧ ಸ್ತರಗಳನ್ನು ಒಳಗೊಂಡಿದೆ. ಸಂಕೀರ್ಣತೆಯಲ್ಲಿ ಹೋಲಿಕೆ ಇಲ್ಲದಿದ್ದರೂ, ಪರಸ್ಪರ ಪ್ರತಿಕ್ರಿಯಿಸುತ್ತಾ, ಅವಲಂಬಿತವಾಗಿರುತ್ತವೆ. ಮನಸ್ಸಿನ ಈ ಸ್ತರಗಳು ವಿಶ್ವಪ್ರಜ್ಞೆಯ ವಿವಿಧ ಅಭಿವ್ಯಕ್ತಿಗಳಾಗಿ ತೋರುತ್ತವೆ.

ಪ್ರಜ್ಞೆಯ ಸ್ವರೂಪ

ಬಹಳ ಕಾಲದಿಂದ, ಮಹಿಳೆಯರನ್ನೂ, ಮಹನೀಯರನ್ನೂ ಬೆರಗುಗೊಳಿಸಿರುವ ಪ್ರಚಲಿತದಲ್ಲಿರುವ ಮೂಲ ಪ್ರಶ್ನೆಯಾದ ಪ್ರಜ್ಞೆಯ ಸ್ವರೂಪವನ್ನು ಕುರಿತು ಹೇಳುತ್ತಾ, ಈ ಉಪನ್ಯಾಸದ ಅಂತ್ಯಕ್ಕೆ ಬರುತ್ತೇನೆ. ಈ ಚರ್ಚೆಯನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತೆ, ನಾನು ಕೆಲವು ಪದಗಳನ್ನು ಪರಿಚಯಿಸಬೇಕು. ನಾನು 'ಪ್ರಜ್ಞೆ' ಎಂದು, ಸ್ವಯಂ ಜಾಗೃತಿಯನ್ನು ಕುರಿತು ಬಳಸುತ್ತೇನೆ. ಜಾಗೃತಾವಸ್ಥೆಯು, ಎಲ್ಲ ಪ್ರಾಣಿಗಳಲ್ಲಿಯೂ ಏಕಕೋಶದಿಂದ ಮಾನವನವರೆಗೆ– ಎಲ್ಲ ಸ್ತರಗಳಲ್ಲಿಯೂ ಕಾಣಸಿಗುವ ಹಣ. ಆದರೆ ಸ್ವಯಂ ಜಾಗೃತಿಯು ಸಂಕೀರ್ಣವಾದ ಉನ್ನತ ಸ್ತರದಲ್ಲಿ ಮಾತ್ರ ಗೋಚರವಾಗುತ್ತದೆ. ಅದೂ ಮಾನವನಲ್ಲಿ ಪೂರ್ಣವಾಗಿ ಗೋಚರವಾಗುತ್ತದೆ. ನಮಗೆ ನಮ್ಮ ಇಂದ್ರಿಯ ಜ್ಞಾನ ಮಾತ್ರವಲ್ಲ, ಅನುಭವ ಚಿಂತನೆಗಳೂ ಹೊಮ್ಮುವ ಈ ಗುಣವನ್ನು ನಾನು 'ಪ್ರಜ್ಞೆ' ಎಂದು ಕರೆಯುತ್ತೇನೆ.

ಪ್ರಜ್ಞೆಯ ಸ್ವರೂಪವನ್ನು ಕುರಿತ ಅನೇಕ ತತ್ವಗಳು, ಎರಡು ವಿರುದ್ಧ ದೃಷ್ಟಿಗಳಲ್ಲಿ, ಒಂದರ ದೃಷ್ಟಿಗೆ ಭಿನ್ನವಾಗಿರುವಂತೆ ಕಂಡುಬಂದರೂ, ವ್ಯವಸ್ಥೆಯ ಮಾರ್ಗಕ್ಕೆ ಪೂರಕವಾಗಿದೆ ಮತ್ತು ಸರಿಹೊಂದುತ್ತದೆ. ಎರಡರಲ್ಲಿ ಒಂದನ್ನು ಪಾಶ್ಚಾತ್ಯ

ವೈಜ್ಞಾನಿಕ ದೃಷ್ಟಿ ಎನ್ನಬಹುದು. ಇಲ್ಲಿ ವಸ್ತುವೇ ಪ್ರಧಾನವಾದದ್ದು. ಪ್ರಜ್ಞೆಯು ದೈವಿಕ ವಿಕಸನದ ಒಂದು ಹಂತದಲ್ಲಿ, ಸಂಕೀರ್ಣವಾದ ಚಿತ್ತಾರದಿಂದ ಹೊಮ್ಮುವ ಗುಣವಿಶೇಷ. ಮತ್ತೊಂದು ಧಾರ್ಮಿಕ ದೃಷ್ಟಿ. ಧಾರ್ಮಿಕ ಪರಂಪರೆಯಲ್ಲಿ ಸಾಮಾನ್ಯವಾಗಿ ಕಂಡುಬರುವಂತಹುದು. ಇಲ್ಲಿ ಪ್ರಜ್ಞೆಯು ಪ್ರಧಾನ ವಾಸ್ತವ– ಅದೇ ಎಲ್ಲದರ ಮೂಲ; ನಿಜರೂಪದಲ್ಲಿ ಪ್ರಜ್ಞೆಯು ನಿರ್ಗುಣ ನಿರಾಕಾರ ಮತ್ತು ಶೂನ್ಯ– ಅದೇ ಶುದ್ಧ ಪ್ರಜ್ಞೆ– ಅಂತಿಮ ಸತ್ಯ. ಅನೇಕ ಧರ್ಮಾಚರಣೆಗಳಲ್ಲಿ, ಪ್ರಜ್ಞೆಯ ಈ ರೂಪವೇ ದೈವಿಕವಾಗಿ ವ್ಯಕ್ತವಾಗುತ್ತದೆ; ಎಲ್ಲ ಕಡೆಯೂ ಕಾಣುವ ಇದು ವಿಶ್ವದ ಸಾರ. ಎಲ್ಲ ವಸ್ತುಗಳಲ್ಲಿಯೂ ಜೀವ ಸಂಕುರಗಳಲ್ಲಿಯೂ ಇದು 'ದೈವಿಕ'ವಾಗಿ ಕಾಣುತ್ತದೆ.

ಧಾರ್ಮಿಕ ಪ್ರಜ್ಞಾದೃಷ್ಟಿಯು, ಧ್ಯಾನಾವಸ್ಥೆಯಿಂದ ಪಡೆಯು ಅತಿಶಯವಾದ ಜಾಗೃತಿಯ ವಾಸ್ತವ ಅನುಭವದ ಆಧಾರವುಳ್ಳದ್ದು. ಈ ರೀತಿಯ ಅತಿಶಯವಾದ ಅನುಭವವನ್ನು, ಆಧುನಿಕ ಮಾನವ ಶಾಸ್ತ್ರಜ್ಞರು, 'ಇಂದ್ರಿಯಾತೀತ' ಅನುಭವ ಎನ್ನುತ್ತಾರೆ. ಏಕೆಂದರೆ ಅದು ವ್ಯಕ್ತಿಯ ಮನಸ್ಸಿಗೆ, ಸಮಗ್ರ ಹಾಗೂ ವಿಶ್ವದ ಮಾನಸಿಕ ಚಿತ್ರಗಳೊಂದಿಗೆ ಸಂಪರ್ಕ ಸ್ಥಾಪಿಸಿಕೊಳ್ಳಲು ಅನುವು ಮಾಡಿ ಕೊಡುತ್ತದೆ. ಪಾಶ್ಚಾತ್ಯ ಮನಶ್ಶಾಸ್ತ್ರದಲ್ಲಿ ಈಗ "ಅತೀಂದ್ರಿಯ ಮನಃಶ್ಶಾಸ್ತ್ರ" ಎಂಬ ಒಂದು ಶಾಖೆಯೇ ಇದೆ. ಇದು ಅತಿಶಯವಾದ ಪ್ರಜ್ಞಾವಸ್ಥೆಯನ್ನು ಗುರುತಿಸಿ, ಅರ್ಥ ಮಾಡಿಕೊಂಡು ಸಾಧಿಸಿಕೊಳ್ಳುವುದನ್ನು ಕುರಿತು, ಮತ್ತು ಸಾಧನೆಗೆ ಅಡ್ಡಿಯಾಗುವ ಮಾನಸಿಕ ಸ್ಥಿತಿಗಳನ್ನು ಕುರಿತು ಅರಿವು ಮೂಡಿಸುತ್ತದೆ. ಈ ಹೊಸ ಶಾಖೆಯ ಕಾಳಜಿಯು ಧಾರ್ಮಿಕ ಪರಂಪರೆಗೆ ಹತ್ತಿರವಾಗಿದೆ ಮತ್ತು ಈ ಪಂಥದ ಹಲವಾರು ಮನಃಶ್ಶಾಸ್ತ್ರಜ್ಞರು, ಮನಃಶ್ಶಾಸ್ತ್ರವನ್ನೂ, ಧಾರ್ಮಿಕ ಪರಂಪರೆಯನ್ನೂ ಒಟ್ಟುಗೂಡಿಸುವ ಹಾಗೂ ಭಾವನಾತ್ಮಕ ಸಂಬಂಧವನ್ನು ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ.

ಇಂದ್ರಿಯಾತೀತ ಅನುಭವಗಳು ವಾಸ್ತವದೊಡನೆ ದೃಢವಾದ, ವೈಯಕ್ತಿಕ ಮತ್ತು ಜಾಗೃತವಾದ ಸಂಬಂಧಗಳನ್ನೊಳಗೊಂಡಿವೆ ಎಂಬುದಕ್ಕೆ ರುಜುವಾತುಗಳಿವೆ. ಆದರೆ ಇದು ಇಂದಿನ ವೈಜ್ಞಾನಿಕ ಮಿತಿಗೆ ಮೀರಿದ ವಿಷಯ. ಆದ್ದರಿಂದ ಇಂದಿನ ಪರಿಸ್ಥಿತಿಯಲ್ಲಿ ಧಾರ್ಮಿಕ ಪ್ರಜ್ಞೆಯನ್ನು, ವಿಜ್ಞಾನವು ಅನುಮೋದಿಸಲಿ ಎಂದಾಗಲೀ, ವಿರೋಧಿಸಲಿ ಎಂದಾಗಲೀ ನಿರೀಕ್ಷಿಸುವಂತಿಲ್ಲ. ಆದರೆ ವ್ಯವಸ್ಥಾ ದೃಷ್ಟಿಯು, ಧಾರ್ಮಿಕ ಹಾಗೂ ವೈಜ್ಞಾನಿಕ ತಿಳುವಳಿಕೆಯನ್ನು ಏಕೀಕರಿಸಿ ಒಂದು ಶ್ರೇಷ್ಠವಾದ ಚೌಕಟ್ಟಿನಲ್ಲಿ ಅಳವಡಿಸಬಹುದು.

ಪ್ರಜ್ಞೆಯು ಒಂದು ಸಂಕೀರ್ಣವಾದ ವಸ್ತುವಿನ ಚಿತ್ತಾರದ ಅಭಿವ್ಯಕ್ತಿ ಎಂಬ ವ್ಯವಸ್ಥೆಯ ದೃಷ್ಟಿಯನ್ನು ಸಾಂಪ್ರದಾಯಿಕ ವೈಜ್ಞಾನಿಕ ದೃಷ್ಟಿಯು ಒಪ್ಪಿಕೊಳ್ಳುತ್ತದೆ.

ಇನ್ನು ಸ್ಪಷ್ಟವಾಗಿ ಹೇಳಬೇಕೆಂದರೆ ಅದು ಜೈವಿಕ ವ್ಯವಸ್ಥೆಯ ಯಾವುದೋ ಸಂಕೀರ್ಣದ ಅಭಿವ್ಯಕ್ತಿ. ಈ ವ್ಯವಸ್ಥೆಗಳ ಜೈವಿಕ ರಚನೆಗಳು, ವ್ಯವಸ್ಥೆ ಸ್ವ–ಸಂಘಟನೆ ಮತ್ತು ಅದರ ಮನಸ್ಸನ್ನು ಪ್ರತಿನಿಧಿಸುವ ಪ್ರಕ್ರಿಯೆಯ ವ್ಯಕ್ತಭಾವ. ಅಂತೆಯೇ ವಸ್ತು ರಚನೆಯನ್ನು ಪ್ರಮುಖ ವಾಸ್ತವ ಎಂದು ಪರಿಗಣಿಸಲಾಗುವುದಿಲ್ಲ. ಇದೇ ಆಲೋಚನಾ ಕ್ರಮವನ್ನು ವಿಶ್ವಕ್ಕೆ ವಿಸ್ತರಿಸಿದಾಗ, ಅದರಲ್ಲಿನ ಎಲ್ಲ ರಚನೆಗಳೂ, ಉಪ ಪರಮಾಣುಗಳಿಂದ ನೀಹಾರಿಕೆಗಳವರೆಗೆ ಮತ್ತು ಏಕಾಣು ಜೀವಿಗಳಿಂದ ಮಾನವನವರೆಗೆ, ವಿಶ್ವದ ಸ್ವ–ಸಂಘಟನಾ ಕ್ರಿಯೆಯ ಅಭಿವ್ಯಕ್ತಿ ಎಂದು ಭಾವಿಸುವುದು ದೂರ ಉಳಿಯುವುದಿಲ್ಲ. ಇದನ್ನೇ ನಾವು ವಿಶ್ವದ ಮನಸ್ಸು ಎಂದು ಗುರುತಿಸುವುದು. ಆದರೆ ಇದು ಬಹುಮಟ್ಟಿಗೆ ಧಾರ್ಮಿಕ ದೃಷ್ಟಿ, ಒಂದೇ ವ್ಯತ್ಯಾಸವೆಂದರೆ, ಧಾರ್ಮಿಕ ದೃಷ್ಟಿಯು ವಿಶ್ವಪ್ರಜ್ಞೆಯ ನೇರ ಅನುಭವಕ್ಕೆ ಒತ್ತು ನೀಡುತ್ತದೆ. ಇದು ವೈಜ್ಞಾನಿಕ ಮಾರ್ಗದಿಂದ ದೂರ. ಆದರೂ ಎರಡೂ ಮಾರ್ಗಗಳೂ ಅನುರೂಪವಾಗಿರುವಂತೆ ಕಾಣುತ್ತದೆ. ಜೀವ, ಮನಸ್ಸು, ಪ್ರಜ್ಞೆ ಮತ್ತು ವಸ್ತುಗಳ ಸ್ವರೂಪವನ್ನು ಕುರಿತು ಬಹಳ ಕಾಲದ ಪ್ರಶ್ನೆಗೆ ಪ್ರಕೃತಿಯ ವ್ಯವಸ್ಥಾದೃಷ್ಟಿಯು ಒಂದು ವೈಜ್ಞಾನಿಕ ಚೌಕಟ್ಟನ್ನಂತೂ ನೀಡುತ್ತದೆ.

ವಿಜ್ಞಾನ ಮತ್ತು ಅಧ್ಯಾತ್ಮಿಕತೆ

ವಾಸ್ತವದ ಹೊಸ ದರ್ಶನವು, ಸದ್ಯದ ಆಸಕ್ತಿಯಾದ ಪರಿಸ್ಥಿತಿಯ ಸಂರಕ್ಷಣೆಯನ್ನು ಮೀರಿದ ಪರಿಸರ ದರ್ಶನ ಎಂಬುವ ವ್ಯವಸ್ಥಾದೃಷ್ಟಿಯ ಪ್ರತಿಪಾದನೆ ಎಂದು ನನ್ನ ಉಪನ್ಯಾಸದಿಂದ ಸ್ಪಷ್ಟವಾಗಿದೆ ಎಂದು ಭಾವಿಸಿದ್ದೇನೆ. ಇದನ್ನು ಆಧುನಿಕ ವಿಜ್ಞಾನ ಬೆಂಬಲಿಸುತ್ತದೆ. ಆದರೆ ಎಲ್ಲ ಜೀವಿಗಳೂ ಒಂದೇ ಎನ್ನುವ ಆಂತರಿಕ ಜಾಗೃತಿ, ವಿವಿಧ ಅಭಿವ್ಯಕ್ತಿಗಳಲ್ಲಿ ಅವುಗಳ ಪರಸ್ಪರ ಅವಲಂಬನೆ, ಜೀವನಚಕ್ರ ಮತ್ತು ಪರಿವರ್ತನೆಗಳ ಆಳವಾದ ಅರಿವು ವೈಜ್ಞಾನಿಕ ಚೌಕಟ್ಟನ್ನು ಮೀರುವಂತಹುದು. ಮಾನವ ಚೈತನ್ಯದ ಪರಿಕಲ್ಪನೆಯು ವಿಶ್ವಪ್ರಜ್ಞೆಯ ಮಾರ್ಗ ಎಂದು ವ್ಯಕ್ತಿ ಅರ್ಥಮಾಡಿಕೊಂಡಾಗ ಪರಿಸರ ಜಾಗೃತಿಯು ಆಧ್ಯಾತ್ಮಿಕ ನೆಲೆಗಟ್ಟನ್ನು ಪಡೆಯುತ್ತದೆ. ಪ್ರತಿಯೊಬ್ಬನೂ ವಿಶ್ವಕ್ಕೆ ಸೇರಿದ್ದಾನೆ ಎಂಬ ಸಂಗತಿಯನ್ನು 'ರಿಲಿಜನ್' ಪದದ ಲ್ಯಾಟಿನ್ ಮೂಲಾರ್ಥದಲ್ಲಿನ 'ದೃಢಬಂಧನ' ಎಂಬ ಅರ್ಥ ಸ್ಪಷ್ಟಪಡಿಸುತ್ತದೆ. ಅಂತೆಯೇ ಸಂಸ್ಕೃತದ 'ಯೋಗ' ಅಂದರೆ 'ಒಟ್ಟುಗೂಡಿಸು' ಎಂಬ ಪದದಲ್ಲಿಯೂ ಇದೇ ಅರ್ಥ ಕಂಡುಬರುತ್ತದೆ.

ಆದ್ದರಿಂದಲೇ ಹೊಸ ವಾಸ್ತವ ದೃಷ್ಟಿಯು, ಧಾರ್ಮಿಕ ದೃಷ್ಟಿಗೆ ಸರಿ ಹೊಂದುವುದರಲ್ಲಿ ಆಶ್ಚರ್ಯವಿಲ್ಲ. ಧರ್ಮಕ್ಕೂ ವಿಜ್ಞಾನಕ್ಕೂ ನಡುವಿನ ಈ ಸಾದೃಶ್ಯವು ಬರಿಯ ಆಧುನಿಕ ಭೌತವಿಜ್ಞಾನಕ್ಕೆ ಸೀಮಿತವಾಗಿರಬೇಕಿಲ್ಲ;

ಅದನ್ನು ಜೀವಶಾಸ್ತ್ರ ಹಾಗೂ ಮನಃಶ್ಶಾಸ್ತ್ರಕ್ಕೂ ವಿಸ್ತರಿಸಬಹುದು. ಈ ದಿನ, ಪೌರ್ವಾತ್ಯರ ಪ್ರಾಚೀನ ಪ್ರತಿಭೆಯು ನಮ್ಮ ಆಧುನಿಕ ವೈಜ್ಞಾನಿಕ ತತ್ವಗಳಿಗೆ ಸ್ಥಿರವಾದ ತಾತ್ವಿಕ ನೆಲಗಟ್ಟನ್ನು ಒದಗಿಸುತ್ತದೆ ಎಂದು ನಾವು ಸಾಕಷ್ಟು ವಿಶ್ವಾಸದಿಂದ ಹೇಳಬಹುದು.

* * * *

೩. ಸಮಾಜ ಮತ್ತು ಸಂಸ್ಕೃತಿಗಳ ಅಂತರಂಗ

ಜೀವಿ ಪರಿಸ್ಥಿತಿಯ ಯಥಾದೃಷ್ಟಿ

ವಿವಿಧ ವಿಜ್ಞಾನ ಶಾಖೆಗಳಿಂದ, ಭೌತವಿಜ್ಞಾನ, ಜೀವವಿಜ್ಞಾನ, ಮನಃಶ್ಶಾಸ್ತ್ರ ಇತ್ಯಾದಿಗಳಿಂದ ಹೊಮ್ಮಿದ ವಾಸ್ತವದ ಹೊಸದರ್ಶನವನ್ನು ಕುರಿತು, ಪರಿಸರ ಸ್ನೇಹಿ, ಕ್ರಿಯಾಶೀಲ ಮತ್ತು ಧಾರ್ಮಿಕ ಸಾರವನ್ನೊಳಗೊಂಡ ದರ್ಶನವನ್ನು ಕುರಿತು, ಎಲ್ಲಕ್ಕಿಂತ ಮಿಗಿಲಾಗಿ ಪಾಶ್ಚಾತ್ಯರ ವಿಜ್ಞಾನ ಮತ್ತು ಪೌರ್ವಾತ್ಯರ ಪ್ರತಿಭೆಯ ಮಿಳಿತವನ್ನು ಸಮರ್ಥವಾಗಿ ಸೂಚಿಸುವ ದರ್ಶನವನ್ನು ಕುರಿತು, ನಾನು ನನ್ನ ಹಿಂದಿನ ಎರಡು ಉಪನ್ಯಾಸಗಳಲ್ಲಿ ತಿಳಿಸಿದ್ದೇನೆ.

ವಾಸ್ತವದ ಈ ಹೊಸ ದರ್ಶನವು ಬರಿಯ ವಿಜ್ಞಾನ ಮತ್ತು ಅಧ್ಯಾತ್ಮಗಳಿಗೆ ಮಾತ್ರ ಸಂಬಂಧಪಟ್ಟಿರದೆ, ಸಮಾಜ ಮತ್ತು ದೈನಂದಿನ ಜೀವನಕ್ಕೂ ವ್ಯಾಪಿಸಿ ಕೊಳ್ಳುತ್ತದೆ. ವಾಸ್ತವವನ್ನು ಕುರಿತ ನಮ್ಮ ಹಳೆಯ ದೃಷ್ಟಿಕೋನವೇ ನಮ್ಮ ಸಮಸ್ಯೆಗಳಿಗೆ ಮೂಲ. ಹೊಸ ಪರಿಸರ ಸ್ನೇಹಿ ದೃಷ್ಟಿಯು ನಮ್ಮ ಜೀವನಕ್ರಮದ ಮೇಲೆ ಅಗಾಧ ಪ್ರಭಾವವನ್ನು ಬೀರುತ್ತದೆ. ನಮ್ಮ ಆರೋಗ್ಯ ಅನಾರೋಗ್ಯಗಳನ್ನು ಕುರಿತು, ಪರಿಸರದೊಡನೆ ನಮ್ಮ ಸಂಬಂಧವನ್ನು ಕುರಿತು, ನಮ್ಮ ರಾಜಕೀಯ ಸಾಮಾಜಿಕ ರಚನೆಗಳನ್ನು ಕುರಿತು ಆಲೋಚನೆ ಮಾಡುವ ಸಂದರ್ಭಗಳಲ್ಲಿ ಇದರ ಪ್ರಭಾವವಿರುತ್ತದೆ. ಉದಾಹರಣೆಗೆ; ಮಾನವ ಶರೀರವನ್ನು, ಸ್ವಯಂ ಸಂಘಟಿತ, ಸ್ವಯಂ ಗುಣಪಡಿಸಿಕೊಳ್ಳುವ ಶಕ್ತಿಯುಳ್ಳ ವ್ಯವಸ್ಥೆ ಮತ್ತು ಅದು ಪರಸ್ಪರ ಅವಲಂಬಿತವಾದ ಶಾರೀರಿಕ ಹಾಗೂ ಮಾನಸಿಕ ರಚನೆ ಇರುವಂಥದು ಎಂದು ಅರ್ಥಮಾಡಿಕೊಂಡು, ಅದಕ್ಕೆ ತಕ್ಕಹಾಗೆ ವೈದ್ಯರು ತಮ್ಮ ಅಭಿಪ್ರಾಯವನ್ನು ವಿಸ್ತರಿಸಿಕೊಳ್ಳಬೇಕು. ಜೊತೆಗೆ ಅದು ಭೌತಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳ, ಪರಸ್ಪರ ಅಂತರಕ್ರಿಯಿಸುವ ಅಂಗಗಳ, ಒಂದು ಅಖಂಡ ವ್ಯವಸ್ಥೆ ಎಂದೂ ಪರಿಗಣಿಸಬೇಕು. ಸಮಾಜ ವಿಜ್ಞಾನವು ಇಂತಹ ಬೃಹತ್ ವ್ಯವಸ್ಥೆಗಳನ್ನು, ಈಗಿನ ಮಿತಿಗಳನ್ನು ವಿಸ್ತರಿಸಿ, ಮೂಲ ಪರಿಕಲ್ಪನೆಯನ್ನು ಪರಿವರ್ತಿಸಿ, ಛಿದ್ರಿಸಿ ಒಳಾರ್ಥಗಳನ್ನು ಕಾಣುವ ತನ್ನ ಸಂಕುಚಿತ ಭಾವವನ್ನು ಬಿಟ್ಟು ವಿಶಾಲ ಜೈವಿಕ ನೆಲೆಯಲ್ಲಿ ಪರಿಗಣಿಸಬೇಕು.

ಜೀವನದ ವ್ಯವಸ್ಥಾ ದೃಷ್ಟಿಯು ಬರಿಯ ವಿಜ್ಞಾನಕ್ಕೆ ಮಾತ್ರವಲ್ಲ, ಸಮಾಜ ಶಾಸ್ತ್ರಕ್ಕೂ ವಿಶೇಷವಾಗಿ ಅರ್ಥಶಾಸ್ತ್ರಕ್ಕೂ ಸರಿಯಾದ ತಳಹದಿಯಾಗುತ್ತದೆ. ಆರ್ಥಿಕ ಕಾರ್ಯಕಲಾಪಗಳಿಗೂ ಪ್ರಕ್ರಿಯೆಗಳಿಗೂ, 'ವ್ಯವಸ್ಥೆ'ಯ ಪರಿಕಲ್ಪನೆಯನ್ನು ತುರ್ತಾಗಿ ಅಳವಡಿಸಿಕೊಳ್ಳಬೇಕಾಗಿದೆ. ಏಕೆಂದರೆ, ನಮ್ಮ ಪ್ರಸಕ್ತ ಆರ್ಥಿಕ ಸಮಸ್ಯೆಗಳು ವ್ಯವಸ್ಥಿತ ಸಮುದಾಯದ ಸಮಸ್ಯೆಗಳು, ಅವುಗಳನ್ನು ಕಾರ್ಟೇಸಿಯನ್ ವಿಜ್ಞಾನ ಪದ್ಧತಿಯಿಂದ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರಿಗೆ ಜೈವಿಕ ದೃಷ್ಟಿ ಇಲ್ಲ. ಅವರು ಅರ್ಥ ವ್ಯವಸ್ಥೆಯನ್ನು, ಅದು ಹುದುಗಿಕೊಂಡಿರುವ ಜೈವಿಕ ಹರವಿನಿಂದ ಬೇರ್ಪಡಿಸಿ ಅವಿವೇಕದ, ಅವಾಸ್ತವ ತಾತ್ವಿಕ ನಮೂನೆಗಳನ್ನಿಟ್ಟುಕೊಂಡು ವಿವರಿಸುತ್ತಾರೆ. ಬಹಳಷ್ಟು ಅವರ ಮೂಲ ಕಲ್ಪನೆಗಳು ಸಂಕುಚಿತ ಭಾವದ ಮತ್ತು ಜೀವ ಸಂಬಂಧಿಯಲ್ಲದ ದೃಷ್ಟಿಯುಳ್ಳವು, ಆದ್ದರಿಂದ ಮೂಲತಃ ಪರಸ್ಪರಾವಲಂಬಿತ ಜಗತ್ತಿನಲ್ಲಿನ ಆರ್ಥಿಕ ಕಲಾಪಗಳನ್ನು ಸರಿಯಾಗಿ ಚಿತ್ರಿಸಲು ಸೂಕ್ತವಾಗಿಲ್ಲ.

ಅರ್ಥಶಾಸ್ತ್ರಜ್ಞರಿಗೆ, ತುರ್ತಾಗಿ ಬೇಕಾದ ಜೀವಾಧಾರಿತ ಯಥಾದೃಷ್ಟಿಯನ್ನು ಒದಗಿಸಲು ಮತ್ತು ಭಾವನೆಗಳ ಗೊಂದಲಗಳನ್ನು ನಿವಾರಿಸಿ ಒಂದು ಶಿಸ್ತನ್ನು ತರಲು, ಈ ವ್ಯವಸ್ಥಾನೋಟದಿಂದ ಸಾಧ್ಯವಾಗುತ್ತದೆ. ವ್ಯವಸ್ಥಾದೃಷ್ಟಿಯಲ್ಲಿ ಅರ್ಥ ವ್ಯವಸ್ಥೆಯೂ ಒಂದು ಜೀವಂತ ವ್ಯವಸ್ಥೆ. ಅದು ಮನುಷ್ಯರನ್ನೂ, ಸಮಾಜದ ವಿವಿಧ ಅಂಗಸಂಸ್ಥೆಗಳನ್ನೂ, ಮತ್ತು ಅವುಗಳ, ನಮ್ಮ ಜೀವನ ಅವಲಂಬಿಸಿರುವ ಪರಿಸರದ ನಿರಂತರ ಪ್ರಕ್ರಿಯೆಯನ್ನೂ ಒಳಗೊಂಡಿದೆ. ಪ್ರತಿ ಅಂಗದಂತೆ, ಪರಿಸರವೂ ಒಂದು ಸ್ವ–ಸಂಘಟಿತ ವ್ಯವಸ್ಥೆ, ಅದರಲ್ಲಿ ಪ್ರಾಣಿ, ಸಸ್ಯ, ಕೀಟಾಣು ಮತ್ತು ನಿರ್ಜೀವ ವಸ್ತುಗಳು, ಪರಸ್ಪರ ಅವಲಂಬನೆಯ ಸಂಕೀರ್ಣ ಬಲೆಯಲ್ಲಿ ಹೆಣೆದುಕೊಂಡು ವಸ್ತು–ಶಕ್ತಿಗಳ ವಿನಿಮಯ ಕ್ರಿಯೆಯ ನಿರಂತರ ಚಕ್ರದಲ್ಲಿ ಸಿಲುಕಿಕೊಂಡಿವೆ. ಈ ಪರಿಸರ ವ್ಯವಸ್ಥೆಯಲ್ಲಿ ಕಾರಣ–ಪರಿಣಾಮಗಳ ನೇರ ಸಂಬಂಧವು ಬಹಳ ಅಪರೂಪ. ಸಾಮಾಜಿಕ ಆರ್ಥಿಕ ವ್ಯವಸ್ಥೆಗಳಲ್ಲಿ ಮತ್ತು ಅವುಗಳ ತಾಂತ್ರಿಕತೆಯಲ್ಲಿ ಹುದುಗಿಕೊಂಡಿರುವ, ಸ್ವಾಭಾವಿಕವಾದ ಪರಸ್ಪರ ಅವಲಂಬನೆಯನ್ನು ವಿವರಿಸಲು ಈ ರೀತಿಯ ನೇರ ಸಂಬಂಧದ ಮಾದರಿ ಅಷ್ಟು ಪ್ರಯೋಜನಕಾರಿಯಲ್ಲ.

ವ್ಯವಸ್ಥೆಯ ಚಟುವಟಿಕೆಗಳ ನೇರವಲ್ಲದ ಸ್ವಭಾವವನ್ನು ಗುರುತಿಸುವುದೇ, ಪರಿಸರ ಜಾಗೃತಿಯ, "ಸಮುದಾಯ ಪ್ರತಿಭೆ"ಯ ಅವಶ್ಯ ಗುಣ. ಈ 'ಪ್ರತಿಭೆ'ಯೇ ಸಾಂಸ್ಕೃತಿಕ ಪರಂಪರೆಯ ವೈಶಿಷ್ಟ್ಯ. ಆದರೆ ಅದನ್ನು ಆಧುನಿಕ ಕೈಗಾರಿಕಾ ಸಮಾಜವು ಅಲಕ್ಷಿಸಿರುವುದು ಒಂದು ವಿಷಾದದ ಸಂಗತಿ. ಪ್ರಕೃತಿಯು ಪ್ರತಿಭೆಗೆ ತೋರುವ ಗೌರವವೇ ಈ ಕಟ್ಟುಪಾಡುಗಳಿಗೊಳಪಟ್ಟ ಪ್ರತಿಭೆಯ ಬುನಾದಿ. ಆಧುನಿಕ ಪರಿಸರ ಜ್ಞಾನದ ಒಳನೋಟಕ್ಕೂ, ಈ ಪ್ರತಿಭೆಗೂ ಸಂಪೂರ್ಣ ಹೊಂದಾಣಿಕೆ ಕಾಣುತ್ತದೆ. ನಮ್ಮ ಪ್ರಾಕೃತಿಕ ಪರಿಸರವು ಅಸಂಖ್ಯ ಜೀವಾಣುಗಳ ವ್ಯವಸ್ಥೆಯನ್ನು

ಒಳಗೊಂಡಿದೆ. ಇವು ಲಕ್ಷಾಂತರ ವರ್ಷಗಳಿಂದ ಅದೇ ಮಣ್ಣಿನ ಕಣಗಳನ್ನು, ಗಾಳಿ–ನೀರನ್ನು ನಿರಂತರವಾಗಿ, ಪುನಃ ಪುನಃ ಬಳಸಿಕೊಳ್ಳುವ ವ್ಯವಸ್ಥೆ, ಈ ಪರಿಸರ ವ್ಯವಸ್ಥೆಯ ಸಂಘಟನಾತತ್ವಗಳು– ಇತ್ತೀಚಿನ ಆವಿಷ್ಕಾರಗಳಿಂದ ಕ್ಷಣಿಕವಾದ ನೇರ ಪ್ರದರ್ಶನಗಳಿಂದ ಕೂಡಿದ, ಮಾನವ ನಿರ್ಮಿತ ತಂತ್ರಜ್ಞಾನಕ್ಕಿಂತ ಅತ್ಯುತ್ತಮವಾಗಿವೆ.

ಜೈವಿಕ ವ್ಯವಸ್ಥೆಯ ಸರಳವಲ್ಲದ ಆಂತರಿಕ ಸಂಬಂಧವು ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ನಿಭಾಯಿಸಲು ಎರಡು ಮುಖ್ಯ ನಿಯಮಗಳನ್ನು ಸೂಚಿಸುತ್ತದೆ. ಮೊದಲನೆಯದಾಗಿ, ಪ್ರತಿಯೊಂದು ರಚನೆಯಲ್ಲಿಯೂ, ಸಂಘಟನೆಯಲ್ಲಿಯೂ, ಸಂಸ್ಥೆಯಲ್ಲಿಯೂ ಒಂದು ಹಿತವಾದ ಪರಿಸ್ಥಿತಿ ಇರುತ್ತದೆ. ಅದರಲ್ಲಿ ಯಾವ ಒಂದು ಅಂಶವೂ ಅತಿಯಾದರೂ ಉದಾ: ಲಾಭ, ಸಾಮರ್ಥ್ಯ ಇತ್ಯಾದಿ– ಬೃಹತ್ ವ್ಯವಸ್ಥೆಯು ನಾಶವಾಗಿಬಿಡುತ್ತದೆ. ಎರಡನೆಯದು, ಯಾವ ಆರ್ಥಿಕ ವ್ಯವಸ್ಥೆಯು ಪ್ರಾಕೃತಿಕ ಸಂಪನ್ಮೂಲಗಳ ಪುನರ್ಬಳಕೆಯನ್ನು ಆಧಾರವಾಗಿಟ್ಟು ಕೊಂಡಿರುತ್ತದೆಯೋ, ಅದು ಸುತ್ತಲಿನ ಪರಿಸರದೊಂದಿಗೆ ಸಮರಸವಾಗಿರುತ್ತದೆ.

'ಚಿಕ್ಕದು ಚೊಕ್ಕವಾಗಿರುತ್ತದೆ'' ಎಂಬ ಷೂಮ್ಯಾಕರ್‌ನ ಘೋಷಣೆಯು ಮೊದಲನೆಯ ನಿಯಮದ ಪ್ರಕಾರ ಆರ್ಥಿಕ ಮತ್ತು ಸಾಮಾಜಿಕ ರಚನೆಯ ಪುನರ್ ಸಂಘಟನೆಯಲ್ಲಿ ಪ್ರಮುಖ ಮಾನದಂಡವಾಗುತ್ತದೆ. ಇದರ ಎಲ್ಲ ಆಲೋಚನೆಗಳ ವಿಶೇಷ ಲಕ್ಷಣಗಳೂ ಮಾನವೀಯತೆಯನ್ನು ಪರಿಗಣಿಸುವಂತಿರ ಬೇಕು. ಯಾವುದು ಮಾನವನ ಮಿತಿಗಿಂತಲೂ ಬೃಹತ್ತಾಗಿಯೂ, ವೇಗವಾಗಿಯೂ, ನಿಬಿಡವಾಗಿಯೂ ಇರುತ್ತದೆಯೋ, ಅದು 'ದೊಡ್ಡದು'. ಪರಿಸರದ ಸಮತೂಕ ಕಾಯ್ದುಕೊಳ್ಳಲು, ವಿಕೇಂದ್ರೀಕರಣವು ಅವಶ್ಯವಾಗುತ್ತದೆ. ಇದರಿಂದ ನಗರಗಳು ಅತಿಯಾಗಿ ಬೆಳೆಯುವುದನ್ನು ತಡೆಯಬಹುದು. ಮಹಾಪಾಲಿಕೆಗಳನ್ನು ವಿಂಗಡಿಸಬಹುದು. ರಾಷ್ಟ್ರದೊಳಗೇ, ಸಂಪತ್ತನ್ನು ಪುನರ್ ಹಂಚಿಕೆ ಮಾಡಬಹುದು. ಕೈಗಾರಿಕಾ ರಾಷ್ಟ್ರಗಳಿಗೆ ಮತ್ತು ತೃತೀಯ ಜಗತ್ತಿನ ರಾಷ್ಟ್ರಗಳ ನಡುವೆಯೂ ಹಂಚಬಹುದು.

ತಂತ್ರಜ್ಞಾನ

ಮಾನವೀಯತೆಯನ್ನು ಗಮನದಲ್ಲಿಡಬೇಕು ಎಂದರೆ, ಗತಕಾಲಕ್ಕೆ ಹಿಂದಿರುಗಬೇಕು ಎಂಬರ್ಥವಲ್ಲ; ಬದಲಿಗೆ ಸರಳವಾದ ತಂತ್ರಜ್ಞಾನವನ್ನು ವೃದ್ಧಿಪಡಿಸಬೇಕು, ಸರಳವಾದ ಸಾಮಾಜಿಕ ಸಂಘಟನೆಗಳನ್ನು ಏರ್ಪಡಿಸಬೇಕು ಎಂದರ್ಥ. ನಮ್ಮ ಅನೇಕ ಸಾಂಪ್ರದಾಯಿಕ ಸಂಪನ್ಮೂಲಾಧಾರಿತ ಮತ್ತು ಅತಿಯಾದ ಕೇಂದ್ರೀಕೃತ ತಂತ್ರಜ್ಞಾನವು ಈಗ ಹಳತಾಗಿಬಿಟ್ಟಿವೆ. ಪರಮಾಣು ಶಕ್ತಿ, ವ್ಯವಸಾಯದಲ್ಲಿ

ಪೆಟ್ರೋಲಿಯಂ ಬಳಕೆ... ಇಂತಹ ತಂತ್ರಜ್ಞಾನವು ಅನಾರೋಗ್ಯಕರ, ಪರಿಸರ ವಿರೋಧಿ ಮತ್ತು ಅದು ಹಣದುಬ್ಬರಕ್ಕೂ ಕಾರಣವಾಗಿವೆ. ಈ ಎಲ್ಲ ತಂತ್ರಜ್ಞಾನವೂ ಎಲೆಕ್ಟ್ರಾನಿಕ್ಸ್, ರಸಾಯನ ವಿಜ್ಞಾನಗಳ ಇತ್ತೀಚಿನ ಆವಿಷ್ಕಾರಗಳನ್ನು ಬಳಸಿಕೊಳ್ಳುತ್ತವೆಯಾದರೂ, ಅವುಗಳು ಇಂದಿಗೆ ಸಲ್ಲದ ಕಾರ್ಟೇಸಿಯನ್ ಪರಿಕಲ್ಪನೆಗಳ ಆಸುಪಾಸಿನಲ್ಲಿಯೇ ಬಳಕೆಯಾಗುತ್ತಿವೆ. ಪರಿಸರ ಸ್ನೇಹಿ ತತ್ವಗಳನ್ನಳವಡಿಸಿಕೊಳ್ಳುವ ತಂತ್ರಜ್ಞಾನದ ಬಳಕೆಯಿಂದ ಅವುಗಳನ್ನು ಹಿಮ್ಮೆಟ್ಟಿಸ ಬೇಕು.

ಇಂತಹ ಬಹಳಷ್ಟು ತಂತ್ರಜ್ಞಾನವು, ಷೂ ಮೆಷರ್ ಹೇಳಿದಂತೆ "ಯೋಗ್ಯ ತಂತ್ರಜ್ಞಾನ"ವು– ಈಗಾಗಲೇ ಪ್ರಗತಿಯಲ್ಲಿವೆ. ಅವು ಸಣ್ಣ ಕೈಗಾರಿಕಾ ಕ್ಷೇತ್ರ ಮತ್ತು ವಿಕೇಂದ್ರೀಕರಣದತ್ತ ಸಾಗಿವೆ. ಅವುಗಳು ಸ್ಥಾನಿಕ ಇತಿಮಿತಿಗಳನ್ನು ಪರಿಗಣಿಸಿ ಸ್ವಯಂಪೂರ್ಣವಾಗಿರಲು ಪ್ರಯತ್ನಿಸುತ್ತಿವೆ. ಅದರಿಂದಲೇ ಅವು ಚೆನ್ನಾಗಿ ಹೊಂದಿಕೊಳ್ಳುವ ಸಾಧ್ಯತೆ ಇದೆ. ಇದನ್ನು "ಮೆದುತಂತ್ರಜ್ಞಾನ" ಎಂದೂ ಕರೆಯುತ್ತಾರೆ. ಏಕೆಂದರೆ, ಇದರಿಂದ ಪರಿಸರಕ್ಕೆ ಆಗುವ ಹಾನಿ ಬಹಳ ಕಡಿಮೆ. ಕಾರಣವೇನೆಂದರೆ, ಇದು ಸಂಪನ್ಮೂಲಗಳನ್ನು ನವೀಕರಿಸಿ ವಸ್ತುಗಳ ಪುನರ್ ಬಳಕೆಗೆ ಆದ್ಯತೆ ನೀಡುತ್ತವೆ. ಸೌರಶಕ್ತಿ ಸಂಗ್ರಾಹಕಗಳು, ಗಾಳಿಯಂತ್ರಗಳು, ಸಾವಯವ ಕೃಷಿ, ತ್ಯಾಜ್ಯ ವಸ್ತುಗಳ ಪುನರ್ ಬಳಕೆ ಇವು ಮೆದುತಂತ್ರಜ್ಞಾನದ ಕೆಲವು ಉದಾಹರಣೆಗಳು.

ಶಕ್ತಿ ಉತ್ಪಾದನಾ ಕ್ಷೇತ್ರದಲ್ಲಿ, ಕಠಿಣ ತಂತ್ರಜ್ಞಾನದಿಂದ ಮೆದುತಂತ್ರಜ್ಞಾನ ಬಳಕೆಗೆ ಬದಲಾಯಿಸಿಕೊಳ್ಳುವುದನ್ನು ತುರ್ತಾಗಿ ಮಾಡಬೇಕಿದೆ. ೧೯೭೦ರ ದಶಕದಲ್ಲಿ ಪಳೆಯುಳಿಕೆ ಇಂಧನ ಕ್ಷೀಣಿಸುತ್ತಿರುವುದರ ಬಗ್ಗೆ ಚಿಂತನೆ ಪ್ರಾರಂಭವಾಯಿತು. ಸಾಂಪ್ರದಾಯಿಕ ಇಂಧನ ಕ್ಷೀಣಿಸುತ್ತಿರುವ ಅಂಶವನ್ನು ಕೈಗಾರಿಕಾ ಕ್ಷೇತ್ರವಿರುವ ರಾಷ್ಟ್ರಗಳು ತೀವ್ರವಾಗಿ ಪರಿಗಣಿಸಿ ಪರಮಾಣು ಇಂಧನವನ್ನು ಪರ್ಯಾಯವಾಗಿ ಬಳಸಲು ಆಲೋಚಿಸಿದವು. ಅಂತಹ ಆಲೋಚನೆ ಚರ್ಚೆಗಳಲ್ಲಿ ಸಮಸ್ಯೆಯನ್ನು ಸೀಮಿತ ದೃಷ್ಟಿಯಿಂದ ಮಾತ್ರ ನೋಡಿದವು. ವಾಸ್ತವವಾಗಿ ಈ ಬಗೆಯ ಚರ್ಚೆಯಲ್ಲಿ ಶಕ್ತಿ ಮೂಲಗಳು ಕ್ಷೀಣಿಸುವುದಕ್ಕೆ ಮೂಲಕಾರಣವನ್ನು ಪರಿಗಣಿಸಿ, ಇಂದು ನಾವು ಎದುರಿಸುತ್ತಿರುವ ಕಠಿಣ ಸಮಸ್ಯೆಗಳಿಗೆ ಕಾರಣ ಹಾಗೂ ಸಂಬಂಧವನ್ನು ಪರಿಗಣಿಸಬೇಕು. ನಮ್ಮ ಅರ್ಥವ್ಯವಸ್ಥೆ ಮತ್ತು ತಂತ್ರಜ್ಞಾನದ ವಿಸ್ತರಣೆಗಳು– ಮುಖ್ಯವಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ ಇಂದಿನ ಇಂಧನದ ಅವಶ್ಯಕತೆಗೆ ಕಾರಣ ಎಂಬುದು ಈ ಯಥಾದೃಷ್ಟಿಯಿಂದ ಸ್ಪಷ್ಟವಾಗುತ್ತವೆ; ಅಳತೆ ಮೀರಿ ಬೆಳೆಯುತ್ತಿರುವ ಈ ವ್ಯವಸ್ಥೆಗಳು ನಮ್ಮ ಪ್ರಾಕೃತಿಕ ಸಂಪನ್ಮೂಲವನ್ನು ಬರಿದು ಮಾಡುತ್ತಿವೆಯಲ್ಲದೇ ನಮ್ಮ ವ್ಯಕ್ತಿ ಮತ್ತು ಸಾಮಾಜಿಕವಾದ ಅನೇಕ ವ್ಯಾಧಿಗಳಿಗೆ ಕಾರಣವಾಗುತ್ತಿದೆ. ಈ ಬಹುಮುಖಿ ಬಿಕ್ಕಟ್ಟಿನಿಂದ ಪಾರಾಗಲು ನಮಗೆ ಬೇಕಿರುವುದು ಹೆಚ್ಚಿನ

ಶಕ್ತಿಮೂಲಗಳಲ್ಲ, ಬದಲಿಗೆ ನಮ್ಮ ಮೌಲ್ಯಗಳ, ಜೀವನ ಶೈಲಿಯ, ನಮ್ಮ ಮನೋಭಾವಗಳಲ್ಲಿನ ಅಗಾಧವಾದ ಬದಲಾವಣೆಯಾಗಬೇಕು.

ದೂರದೃಷ್ಟಿಯಿಂದ ಮಾಡಿದ ಈ ಗುರಿಯನ್ನು ಸಾಧಿಸಲು ನಾವು ನವೀಕರಿಸಲಾಗದ ಮೂಲಗಳಿಂದ ಶಕ್ತಿ ಪಡೆಯುವುದನ್ನು ಕಡಿಮೆ ಮಾಡಬೇಕು. ಕಠಿಣ ತಂತ್ರಜ್ಞಾನವನ್ನು ಬಿಟ್ಟು ಮೆದುತಂತ್ರಜ್ಞಾನವನ್ನು ಅವಲಂಬಿಸಬೇಕು. ಆಗ ಮಾತ್ರ ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳಬಹುದು. ದುರದೃಷ್ಟವಶಾತ್, ಅನೇಕ ಕೈಗಾರಿಕಾ ರಾಜ್ಯಗಳ ಶಕ್ತಿನೀತಿಯು, "ಕಠಿಣ ಶಕ್ತಿ ಮಾರ್ಗ"ವನ್ನು ಅನುಸರಿಸುತ್ತಿವೆ. ಅದರಲ್ಲಿ ಶಕ್ತಿಯು ನವೀಕರಿಸಲಾಗದ ಮೂಲಗಳಿಂದ– ಎಣ್ಣೆ ನಿಸರ್ಗ ಅನಿಲ, ಕಲ್ಲಿದ್ದಲು ಯುರೇನಿಯಂ ಅತಿಯಾಗಿ ಕೇಂದ್ರೀಕೃತವಾದ ಕಠಿಣ ಮಾರ್ಗದಿಂದ ಉತ್ಪಾದನೆಯಾಗುತ್ತಿದೆ. ಇದು ಅನಾರೋಗ್ಯಕರ ಹಾಗೂ ಆರ್ಥಿಕ ಭದ್ರತೆ ಇಲ್ಲದ ಮಾರ್ಗ. ಪರಮಾಣು ಶಕ್ತಿಮೂಲವಂತೂ, ಶಕ್ತಿಯನ್ನು ಪಡೆಯುವ ಅತ್ಯಂತ ಭಯಂಕರ ಹಾಗೂ ಕಠಿಣ ಮಾರ್ಗ. ಕಲ್ಲಿದ್ದಲಿನಿಂದ ಶಕ್ತಿಯನ್ನು ಒದಗಿಸಿಕೊಳ್ಳುತ್ತಿರುವ ಮಾರ್ಗದಿಂದ ಈಗಾಗಲೇ ಸಾಕಷ್ಟು ಹಾನಿಯುಂಟಾಗಿದೆ. ಇದು ನಮ್ಮ ವಾತಾವರಣವನ್ನು, ಸಾವಿರಾರು ವರ್ಷಗಳಿಂದ, ವಿಷವನ್ನು ಕಾರಿ ನಾಶಮಾಡುತ್ತಿದೆ ಮತ್ತು ಇಡೀ ಮನುಕುಲವನ್ನೇ ನಶಿಸುವಂತೆ ಮಾಡುವ ಬೆದರಿಕೆಯನ್ನೊಡ್ಡುತ್ತಿದೆ. ಪರಮಾಣು ಶಕ್ತಿ ಎನ್ನುವ ಪರಾಕಾಷ್ಠ ತಂತ್ರಜ್ಞಾನ ನಮ್ಮ ಕೈಮೀರಿ ಹೋಗಿರುವಂತಿದೆ. ಅದು ಭ್ರಮೆಯ ಬೆನ್ನೇರಿ ತಾನೇ ಪ್ರತಿಷ್ಠಾಪಿಸಿಕೊಂಡು ಹಿಡಿತ ಸಾಧಿಸಿಕೊಂಡು ಬಿಟ್ಟಿದೆ. ಅದನ್ನೇ ವಿಶೇಷವಾದ ವಿಶ್ಲೇಷಣೆಗೆ ಗುರಿಪಡಿಸ ಬೇಕಾಗಿದೆ.

ಪರಮಾಣು ಶಕ್ತಿಯನ್ನು ಕುರಿತು ಹೀಗೆ ಹೇಳುವಾಗ, ನಾನು ಪರಮಾಣು ಕಾರ್ಯಾಗಾರ ಮತ್ತು ಪರಮಾಣು ಆಯುಧಗಳೆರಡರನ್ನೂ ಗಣನೆಗೆ ತೆಗೆದು ಕೊಂಡಿದ್ದೇನೆ. ಎರಡೂ ತಂತ್ರಜ್ಞಾನಗಳಲ್ಲಿ ಪರಮಾಣುವಿನ ಆಂತರಿಕ ಗುಣದ ಬಳಕೆಯಾಗಿದೆ. ಎರಡನ್ನೂ ಬೇರ್ಪಡಿಸಲಾಗುವುದಿಲ್ಲ. ಎರಡೂ ಇಂದು ನಮ್ಮ ಆರೋಗ್ಯ ಉಳಿವಿಗೆ ಅತಿ ದೊಡ್ಡ ಭೀತಿಯನ್ನೊಡ್ಡುತ್ತಿವೆ. ಪರಮಾಣು ಶಕ್ತಿ ಮೂಲವು ಬಹುಬೇಗ ಅಸಮರ್ಥ ಮತ್ತು ಅನರ್ಥಕಾರಿಯಾಗಿ ಪರಿಣಮಿಸುತ್ತಿದೆ. ಕೈಗಾರಿಕಾ ರಾಷ್ಟ್ರಗಳು, ಅಸಮರ್ಥ, ಅನರ್ಥಕಾರಿ ಎಂದು ಪರಿಗಣಿಸಿದ ಇತರ ಫಲಿತಗಳಂತೆ, ಪರಮಾಣು ಶಕ್ತಿ ತಂತ್ರಜ್ಞಾನವನ್ನೂ ತೃತೀಯ ರಂಗ ರಾಷ್ಟ್ರಗಳೆಡೆಗೆ ತಳ್ಳುತ್ತಿವೆ. ಇದಂತೂ ತೃತೀಯ ರಂಗ ರಾಷ್ಟ್ರಗಳ ಶಕ್ತಿಮೂಲ ವೃದ್ಧಿಗಾಗಿ ಅಲ್ಲ, ಬದಲಿಗೆ ಅಲ್ಲಿಯ ಪ್ರಾಕೃತಿಕ ಸಂಪನ್ಮೂಲವನ್ನು ಬೇಗ ಬೇಗನೆ ಹೀರಿಕೊಂಡು ಬಹುರಾಷ್ಟ್ರೀಯ ಕಂಪೆನಿಗಳ ರಾಷ್ಟ್ರವು– ತಾವು ಬೆಳೆಯುವ ಹುನ್ನಾರ ಅಷ್ಟೆ. ಪರಮಾಣು ಆಯುಧಗಳನ್ನು ತಯಾರಿಸಿಕೊಳ್ಳುವ ಅವಕಾಶ ಸಿಗುವುದೆಂಬ

ಕಾರಣಕ್ಕಾಗಿ, ತೃತೀಯ ರಂಗ ರಾಷ್ಟ್ರದ ರಾಜಕಾರಣಿಗಳು ಪರಮಾಣು ಶಕ್ತಿಯ ತಂತ್ರಜ್ಞಾನಕ್ಕೆ ಆತುಕೊಳ್ಳುತ್ತಿದ್ದಾರೆ.

ಪರಮಾಣು ಶಕ್ತಿಯಿಂದಾಗುವ ಅಪಾಯ ಸಂಕೀರ್ಣವಾದುದು, ಬಹು ಆಯಾಮದ ನೆಲೆಯಲ್ಲಿ ನಡೆಯುವಂತಹುದು, ದೇಶ–ಕಾಲಗಳ ವ್ಯಾಪ್ತಿಯಲ್ಲಿ ಹರಡಿಕೊಳ್ಳುವಂತಹುದು. ಅದನ್ನು ಅರ್ಥ ಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. ಆದರೆ ಎಚ್ಚರಿಕೆಯಿಂದ ಆಮೂಲಾಗ್ರವಾಗಿ ಅಧ್ಯಯನ ಮಾಡಿದಾಗ ಅನರ್ಥವಾದ, ಬೇಜವಾಬ್ದಾರಿಯಾದದ್ದು, ಆದ್ದರಿಂದ ಅದಕ್ಕೇ ಆತುಕೊಳ್ಳುವುದು ಯೋಗ್ಯವಾದ ಕೆಲಸವಲ್ಲ.

ಸೌರಶಕ್ತಿಯ ಹಾದಿಯಲ್ಲಿ

ಮುಂದಿನ ದಿನಗಳಲ್ಲಿ ನಮಗೆ, ಪರಿಸರವನ್ನು ಹಾಳುಗೆಡವದ, ಆರ್ಥಿಕವಾಗಿ ಸಮರ್ಥವಾಗಿರುವ, ನವೀಕರಿಸಲು ಅನುಕೂಲವಾಗಿರುವಂತಹ ಶಕ್ತಿಮೂಲಗಳು ಬೇಕಾಗುತ್ತವೆ. ಸೌರಶಕ್ತಿ ಈ ಅವಶ್ಯಕತೆಗಳನ್ನೂ ಪೂರೈಸುತ್ತದೆ. ಲಕ್ಷಾಂತರ ವರ್ಷಗಳಿಂದ ಸೂರ್ಯನೇ ನಮ್ಮ ಗ್ರಹದ ಶಕ್ತಿಮೂಲ. ಇಲ್ಲಿನ ಕೋಟ್ಯಂತರ ಜೀವರಾಶಿಗಳ ಬದುಕು ವಿಕಸನಗಳು ಸೂರ್ಯನ ಶಕ್ತಿಗೆ ಹೊಂದಿಕೊಂಡಿವೆ. ಪರಮಾಣು ಶಕ್ತಿಯನ್ನುಳಿದು, ನಮ್ಮ ಉಳಿದ ಶಕ್ತಿ ಮೂಲಗಳೆಲ್ಲವೂ ಸೂರ್ಯನ ಶಕ್ತಿಯನ್ನು ಒಂದಲ್ಲ ಒಂದು ರೂಪದಲ್ಲಿ ತುಂಬಿಸಿಕೊಂಡಿವೆ. ಆದರೂ ಈ ಎಲ್ಲವನ್ನೂ ನವೀಕರಿಸಲಾಗುವುದಿಲ್ಲ. ಇಂದು ಶಕ್ತಿಗೆ ಸಂಬಂಧಪಟ್ಟಂತೆ ನಡೆಯುವ ಎಲ್ಲ ಚರ್ಚೆಗಳಲ್ಲಿಯೂ ಸೌರಶಕ್ತಿಯು, ಬರಿದುಮಾಡಲಾಗದ ಅಥವಾ ನವೀಕರಿಸಬಹುದಾದ ಶಕ್ತಿ, ಎಂದೇ ಬಿಂಬಿತವಾಗಿದೆ. ಸೌರಶಕ್ತಿಯು ನಾನಾ ರೂಪಗಳಲ್ಲಿ ದೊರಕುತ್ತದೆ. ಕಾಡು ಪ್ರಧಾನವಾಗಿರುವಲ್ಲಿ 'ಮರ'ವಾಗಿ, ಕೃಷಿ ಪ್ರಧಾನವಾಗಿರುವಲ್ಲಿ ಅನಿಲ ಅಥವಾ ದ್ರವರೂಪದಲ್ಲಿ ಪರ್ವತಗಳ ನಾಡಿನಲ್ಲಿ ಜಲವಿದ್ಯುತ್ತಾಗಿ, ಗಾಳಿಬೀಡುಗಳಲ್ಲಿ ಗಾಳಿಯಂತ್ರಗಳಿಂದ ಪಡೆಯಬಹುದಾದ ವಿದ್ಯುತ್ತಾಗಿ, ಬಿಸಿಲು ಪ್ರದೇಶಗಳಲ್ಲಿ ನೇರವಾಗಿ ಸಂಗ್ರಹಿಸಲು ಅನುಕೂಲವಾಗುವಂತೆ ದೊರೆಯುತ್ತದೆ.

ಬಹುತೇಕ ಈ ಎಲ್ಲ ರೂಪಗಳಲ್ಲಿರುವ ಸೌರಶಕ್ತಿಯನ್ನು ಮಾನವ ಕುಲವು ಯುಗಾಂತರಗಳಿಂದ, ಕಾಲಕ್ಕೆ ತಕ್ಕಂತೆ ಬದಲಾಗುವ ತಂತ್ರಜ್ಞಾನ ಬಳಸಿ ಹೀರಿಕೊಳ್ಳುತ್ತಾ ಬಂದಿದೆ. ಸೌರಶಕ್ತಿಯ ಬಳಕೆಗೆ, ತಂತ್ರಜ್ಞಾನದಲ್ಲಿ ಪ್ರಮುಖವಾದ ಬದಲಾವಣೆಯನ್ನೇನೂ ಮಾಡಬೇಕಾಗಿಲ್ಲ. ನಮ್ಮ ಆಧುನಿಕ ಸಮಾಜವು ತನಗೆ ಈಗಾಗಲೇ ತಿಳಿದಿರುವ ಕೃಷಿ ಮತ್ತು ತಂತ್ರಜ್ಞಾನಗಳನ್ನು ವಿವೇಚನೆಯಿಂದ ಒಟ್ಟುಗೂಡಿಸಿಕೊಳ್ಳಬೇಕಷ್ಟೆ. ಈಗ ನಮ್ಮಲ್ಲಿರುವ ಮೆದು ತಂತ್ರಜ್ಞಾನವು ಇಂದಿನ

ನಮ್ಮ ಶಕ್ತಿ ಬೇಡಿಕೆಗಳನ್ನು ಪೂರೈಸಲು ಸಾಕಾಗುತ್ತದೆ ಎಂದು ಅಧ್ಯಯನಗಳು ತಿಳಿಸಿವೆ. ಅವುಗಳಲ್ಲಿ ಬಹಳಷ್ಟು ಪ್ರಕಾರಗಳನ್ನು ಈಗಾಗಲೇ ಹಲವಾರು ಪ್ರಜ್ಞಾವಂತ ಗುಂಪುಗಳು ಯಶಸ್ವಿಯಾಗಿ ಬಳಸುತ್ತಿವೆ. ಸಮರ್ಥವಾದ ಸೌರ ತಂತ್ರಜ್ಞಾನವನ್ನು ಸ್ಥಳೀಯ ಸಮುದಾಯಗಳು, ಸ್ಥಳೀಯವಾದ ಸಣ್ಣ ಸಲಕರಣೆಗಳನ್ನು ಬಳಸಿಕೊಂಡು ಸ್ಥಾಪಿಸಿಕೊಂಡರೆ, ಆಗ ಅಲ್ಲಿ ನಿರುದ್ಯೋಗ ನಿವಾರಣೆಯೂ ಆಗುತ್ತದೆ, ಅಡ್ಡಪರಿಣಾಮಗಳೂ ಇರುವುದಿಲ್ಲ.

ಸೌರಯುಗ ಮಾರ್ಗ ಈಗ ಮುಕ್ತವಾಗಿದೆ ಎಂದು ಇತ್ತೀಚಿನ ಹಲವಾರು ಅಧ್ಯಯನಗಳು ತೋರಿಸಿ ಕೊಟ್ಟಿವೆ. ಅನೇಕ ಕ್ಷೇತ್ರಗಳಲ್ಲಿ ತಂತ್ರಜ್ಞಾನದ ಅಭಿವೃದ್ಧಿ ಇನ್ನು ಆಗಬೇಕು. ಆದರೂ ಐತಿಹಾಸಿಕ ಬದಲಾವಣೆಯ ಮೆಟ್ಟಿಲೇರಲು, ನಾವೇನೂ ದೊಡ್ಡದಾದ ಯಾವ ತಂತ್ರಜ್ಞಾನಕ್ಕೂ ಕಾದು ಕುಳಿತಿರಬೇಕಿಲ್ಲ. ಬದಲಿಗೆ ಸೌರಶಕ್ತಿಯ ಉಪಯೋಗವನ್ನು ಅದರ ಸಾಮಾಜಿಕ ಮತ್ತು ಆರ್ಥಿಕ ನೀತಿಯನ್ನು ಸಾರ್ವಜನಿಕರಿಗೆ ಮನದಟ್ಟು ಮಾಡಿ, ಸೌರಶಕ್ತಿಯ ಹಾದಿಯನ್ನು ಸುಗಮಗೊಳಿಸಬೇಕಾಗಿದೆ.

ಸಂಸ್ಕೃತಿಯ ಉನ್ನತಿ

ಸೌರಶಕೆ ಆರಂಭವಾಗುತ್ತಿದೆ. ಬರೀ ತಂತ್ರಜ್ಞಾನದಿಂದಲ್ಲ, ವಿಶಾಲ ದೃಷ್ಟಿಯಲ್ಲಿ. ಪ್ರಪಂಚದ ಅನೇಕ ಸಮಾಜಗಳಲ್ಲಿಯೂ ಬದಲಾವಣೆಯಾಗುತ್ತಿದೆ. ಯಾಂತ್ರಿಕ ಮಾದರಿಗಳಿಂದ ಪರಿಸರ ಸ್ನೇಹಿ ಮಾದರಿಗೆ ಬದಲಾವಣೆ– ಮುಂದೆ ಎಂದೋ ನಡೆಯುತ್ತದೆ ಎಂದಲ್ಲ– ಅದು ಇಂದೇ ನಡೆಯುತ್ತಿದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳನ್ನು ವಿವರಿಸುವಾಗ ನಾನು ಯೂರೋಪ್ ಮತ್ತು ಉತ್ತರ ಅಮೆರಿಕ ದೇಶಗಳ ದೃಷ್ಟಿಕೋನಗಳನ್ನು ಬಳಸಿಕೊಳ್ಳುತ್ತೇನೆ. ಆದರೆ ಅಲ್ಲಿಯ ಬಹಳಷ್ಟು ಬೆಳವಣಿಗೆಗಳು ಭಾರತಕ್ಕೂ ಅನ್ವಯವಾಗುತ್ತದೆ ಎನ್ನುವ ನಂಬಿಕೆ ನನಗಿದೆ. ನಮ್ಮ ಭೂಮಿಯ ಮೇಲಣ ಜನಸಂಖ್ಯೆ ಎಷ್ಟು ಸಾಂದ್ರವಾಗಿದೆ, ಎಂದರೆ, ಎಲ್ಲ ಅರ್ಥ ವ್ಯವಸ್ಥೆಗಳೂ ಹೆಣೆದುಕೊಂಡು ಪರಸ್ಪರ ಅವಲಂಬಿಸಿಕೊಂಡು ಬಿಟ್ಟಿವೆ. ಅದರಿಂದಲೇ ಇಂದಿನ ಪ್ರಮುಖ ಸಮಸ್ಯೆಗಳೂ ಜಾಗತಿಕ ಸಮಸ್ಯೆಗಳೇ. ನಾವೆದುರಿಸುವ ಮುಖ್ಯವಾದ ಸಾಮಾಜಿಕ ಆಯ್ಕೆಗಳು ಸ್ಥಳೀಯವಾಗಿ ಉಳಿದಿಲ್ಲ. ಅವೀಗ ಸ್ವ–ಸಂಘಟನೆಯ ತತ್ವಗಳಲ್ಲಿ ಕೇಂದ್ರೀಕೃತ ಅಥವಾ ವಿಕೇಂದ್ರಿಕೃತವೋ– ಕಠಿಣ ಅಥವಾ ಮೆದು ತಂತ್ರಜ್ಞಾನವೋ ಯಾವುದು ಮನುಕುಲದ ಉಳಿವಿಗೆ ಸಹಕಾರಿಯಾಗುತ್ತದೆ ಎಂಬುದು ಮುಖ್ಯ ವಿಚಾರವಾಗುತ್ತದೆ.

೧೯೬೦–೭೦ರ ದಶಕದಲ್ಲಿ, ಯೂರೋಪ್ ಮತ್ತು ಉತ್ತರ ಅಮೆರಿಕ ದೇಶಗಳ, ಅಧ್ಯಾತ್ಮ, ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಚಳುವಳಿಗಳು ನಡೆದವು. ಎಲ್ಲವೂ ಒಂದೇ ನಿಟ್ಟಿನಲ್ಲಿ ವಿಚಾರ ಮಾಡುತ್ತಾ, ವಾಸ್ತವದ ಹೊಸ

ದರ್ಶನವನ್ನು ಕುರಿತಂತೆ ವಿವಿಧ ಮುಖಗಳಿಗೆ ಒತ್ತು ನೀಡಿದವು. ರಾಲ್ಫ್ ನಾಡಾರ್ ಅವರ ಪ್ರಾರಂಭಿಕ ಪ್ರಯತ್ನವನ್ನು ಮುಂದುವರೆಸುತ್ತಾ ಅನೇಕ ನಾಗರಿಕ ಚಳುವಳಿಗಳು– ಸಾಮಾಜಿಕ ಮತ್ತು ಪರಿಸರ ವಿವಾದಗಳನ್ನು ಕುರಿತಂತೆ– ಟಿಸಿಲೊಡೆದವು. ಇತ್ತೀಚಿನ ವರ್ಷಗಳಲ್ಲಿ ಎಲ್ಲವೂ ಒಟ್ಟಾಗಿ, ಒಂದೇ ವಿಚಾರವನ್ನು ಬಿಟ್ಟು ಮೂಲ ಕಟ್ಟುಪಾಡುಗಳನ್ನು ಕುರಿತು ಆಸಕ್ತಿ ವಹಿಸಿ ಮುಂದುವರಿಯುವ ಒಲವನ್ನು ತೋರುತ್ತಿವೆ. ಹಲವಾರು ಸಂಘಟನೆಗಳ ಪರಿಸರ ಚಳುವಳಿಗಳು ಈ ಪ್ರಯತ್ನಗಳಿಗೆ ಹತ್ತಿರವಾಗಿವೆ. ಇಂತಹ ಗುಂಪುಗಳು ಮಾಹಿತಿ ಕೇಂದ್ರಗಳನ್ನು ನಡೆಸುತ್ತಿವೆ. ಪರಿಸರ ಕಾಳಜಿಯನ್ನು ಕುರಿತಂತೆ ಕರಪತ್ರಗಳನ್ನು ಪ್ರಕಟಿಸುತ್ತಿವೆ. ಸಾವಯವ ಕೃಷಿ, ತ್ಯಾಜ್ಯದ ಪುನರ್ಬಳಕೆ ಮತ್ತು ಜೀವರಾಶಿಗಳನ್ನು ಕುರಿತ ಕಾಳಜಿಯನ್ನು ಪ್ರಚಾರ ಮಾಡುತ್ತಿವೆ. ಕೆಲವು ಸಂಘಟನೆಗಳು ಅದರ ಅಭಿವೃದ್ಧಿಗೆ ಮೆದು ತಂತ್ರಜ್ಞಾನ ಬಳಕೆಗೆ ಬೇಕಾದ ಸಹಾಯ ಸಹಕಾರಗಳನ್ನು ಒದಗಿಸುತ್ತಿವೆ ಮತ್ತು ಪರಮಾಣು ಸಂಬಂಧೀ ವಿಚಾರಗಳನ್ನು ವಿರೋಧಿಸುತ್ತಿವೆ.

ಪ್ರಜೆ ಮತ್ತು ಗ್ರಾಹಕ ಚಳುವಳಿಗಳು ಕೂಡ– ವಿಕೇಂದ್ರೀಕರಣ, ಸಹಕಾರಿ ಮತ್ತು ಪರಿಸರ ಸ್ನೇಹಿ ಜೀವನ ಶೈಲಿ, ನೈಪುಣ್ಯಗಳಲ್ಲಿ ವಿನಿಮಯ, ಗೃಹ ಕೈಗಾರಿಕೆಗಳಂತಹ ಸೇವೆಗಳಿಂದ ಬೇರೆಯೇ ಒಂದು ಅರ್ಥವ್ಯವಸ್ಥೆಗೆ ಕಾರಣವಾಗುತ್ತಿವೆ. ಸಂಯುಕ್ತ ಸಂಸ್ಥಾನಗಳಲ್ಲಿ, ಕೆನಡಾದಲ್ಲಿ, ಇಂಗ್ಲೆಂಡಿನಲ್ಲಿ, ಸ್ಕಾಂಡಿನೇವಿಯ ರಾಜ್ಯಗಳಲ್ಲಿ ನೆದರ್‌ಲ್ಯಾಂಡ್, ಜಪಾನ್ ಮತ್ತು ನ್ಯೂಜಿಲೆಂಡ್‌ಗಳಲ್ಲಿ ಇಂತಹ ಒಂದು ಅರ್ಥವ್ಯವಸ್ಥೆಯ ಚಿತ್ರಗಳು ಸ್ವಾರಸ್ಯಕರವಾಗಿ, ಪ್ರಮುಖವಾಗಿ, ಅರ್ಥಪೂರ್ಣವಾಗಿ ಮೂಡುತ್ತಿದೆ.

ಕಾರ್ಮಿಕ ಸಹಭಾಗಿತ್ವ ಮತ್ತು ಸ್ವಯಂ ಆಡಳಿತ ಚಳುವಳಿಗಳು ಇಂತಹ ಅರ್ಥವ್ಯವಸ್ಥೆಯ, ಅದರ ಪುನರ್ ರಚನೆಯ– ಮತ್ತೊಂದು ಮುಖ್ಯವಾದ ಕೊಡುಗೆ, ಇದು ಯೂರೋಪಿನ ಹಲವು ರಾಷ್ಟ್ರಗಳಲ್ಲಿ ಮತ್ತು ಕೆನಡದಲ್ಲಿ ಚಾಲ್ತಿಯಲ್ಲಿದೆ. ಮೊದಲು ಯುಗೋಸ್ಲಾವಿಯದಲ್ಲಿ ಈ ಪದ್ಧತಿ ಜಾರಿಗೆ ಬಂದಿತು. ಅಲ್ಲಿ ಅದು ಯಶಸ್ವಿಯಾಗಿ, ಉಳಿದ ದೇಶಗಳಲ್ಲಿ ಸ್ವೀಡನ್, ಜರ್ಮನಿ ಮತ್ತು ಇತರ ಪಶ್ಚಿಮ ಯೂರೋಪ್ ರಾಷ್ಟ್ರಗಳಿಗೆ ಮಾದರಿಯಾಯಿತು. ಇಂದು, ಚೀನಿಯರ ಸ್ವಾವಲಂಬನೆಯ ಸಂಘಟನೆ ಅಭಿವೃದ್ಧಿ ತೃತೀಯ ರಂಗ ರಾಷ್ಟ್ರಗಳ ಪಾರಂಪರಿಕ ಮೌಲ್ಯ ಮತ್ತು ಜೀವನಶೈಲಿಯಿಂದ, ಯುಗೋಸ್ಲಾವಿಯದ ಸ್ವಯಂ ಆಡಳಿತ ಪದ್ಧತಿ ಮತ್ತು ಅಮೆರಿಕ ಮತ್ತಿತರ ದೇಶಗಳಲ್ಲಿ ಅಭಿವೃದ್ಧಿಯಾಗುತ್ತಿರುವ ಅನೌಪಚಾರಿಕ ಅರ್ಥವ್ಯವಸ್ಥೆಯವರೆಗೆ– ಪ್ರಪಂಚದ ವಿವಿಧ ಕ್ರಿಯಾಶೀಲ ಸಮಾಜಗಳಿಂದ ತಮಗೆ ಬೇಕಾದ ಯುಕ್ತ ಮಾರ್ಗಗಳನ್ನು ಹೊಂದಿಸಿ ಜೋಡಿಸಿಕೊಳ್ಳುವ ಸಾಧ್ಯತೆ ಉಳಿದ ಸಮಾಜಗಳಿಗಿವೆ.

ಪರಿಸರ ಚಳುವಳಿಯು, ಪರಿಸರದ ವಾಸ್ತವಿಕ ದರ್ಶನವನ್ನು ವೃದ್ಧಿಪಡಿಸುತ್ತಿರುವ ವಿಚಾರವನ್ನು ನನ್ನ ಉಪನ್ಯಾಸಗಳಲ್ಲಿ ಸಾಕಷ್ಟು ವಿಸ್ತೃತವಾಗಿ ವಿವರಿಸಿದ್ದೇನೆ. ಈ ದರ್ಶನ ಈಗ ಆಕಾಶಕಾಯಗಳನ್ನೂ ವ್ಯಾಪಿಸಿಕೊಳ್ಳುತ್ತಿದೆ. ವ್ಯೋಮಯಾನಿಗಳು "ಸ್ಪೇಸ್‌ಶಿಪ್ ಭೂಮಿ", "ಸಮಗ್ರ ಭೂಮಿ" ಎಂದು ತಮ್ಮ ಅನುಭವವನ್ನು ವ್ಯಕ್ತಪಡಿಸುತ್ತಾ, ಇದನ್ನು ಬಲವಾಗಿ ಸಮರ್ಥಿಸುತ್ತಾರೆ. ಹಲವಾರು ವ್ಯಕ್ತಿಗಳಿಂದ, ಸಂಘ–ಸಂಸ್ಥೆಗಳಿಂದ, ಅಂತರಜಾಲಗಳಿಂದ ಈ ಬಗೆಯ ಜಾಗೃತಿ ಮೂಡುತ್ತಿದೆ. ಯೂರೋಪ್ ಮತ್ತು ಉತ್ತರ ಅಮೆರಿಕದ ಬಹಳ ಜನರಲ್ಲಿ ಈ ರೀತಿಯ ಮೌಲ್ಯದ ಬದಲಾವಣೆ ಗಮನಾರ್ಹವಾಗಿ ಕಾಣುತ್ತಿದೆ. ಬದಲಾವಣೆಯು, ಲೌಕಿಕ ಉಪಯೋಗದಿಂದ ಸ್ವಯಂ ಸರಳತೆಗೆ– ಆರ್ಥಿಕ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ಆಂತರಿಕ ಬೆಳವಣಿಗೆ ಮತ್ತು ಅಭಿವೃದ್ಧಿಯ ಕಡೆಗೆ ಪಲ್ಲಟವಾಗುತ್ತಿದೆ.

ಲೌಕಿಕದಿಂದ ಆಂತರಿಕ ಅಭಿವೃದ್ಧಿ ಕಡೆಗೆ ನಡೆಯುವ ಬದಲಾವಣೆಗೆ, ಸಂಯುಕ್ತ ಸಂಸ್ಥಾನಗಳಲ್ಲಿ "ಮಾನವಶಕ್ತಿ", "ಸಮಗ್ರ ಆರೋಗ್ಯ", "ಸ್ತ್ರೀವಾದ" ಮುಂತಾದ ಚಳುವಳಿಗಳು ಮತ್ತು ಧಾರ್ಮಿಕ ಚಟುವಟಿಕೆಗಳು ಸಹಾಯ ಮಾಡುತ್ತಿವೆ. ಲೌಕಿಕ ಸಂಗ್ರಹಣೆಯೇ ಮನುಷ್ಯನ ಅವಶ್ಯಕತೆ. ಅದನ್ನು ತಾತ್ವಿಕವಾಗಿ ತಣಿಸಲಾಗದು ಎಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಆದರೆ ಮನಶ್ಶಾಸ್ತ್ರಜ್ಞರು ಅಲೌಕಿಕವಾದ ಅವಶ್ಯಕತೆಗಳಿಗೆ ಒತ್ತು ಕೊಟ್ಟು, ಮಾನವ ಸ್ವಭಾವದ ವಿಭಿನ್ನ ಚಿತ್ರವನ್ನೇ ನೀಡುತ್ತಾರೆ. ಮಾನವಾತೀತ ಮನಃಶ್ಶಾಸ್ತ್ರಜ್ಞರು, ಇದನ್ನು ಇನ್ನೂ ವಿಸ್ತರಿಸಿ ಮಾನವ ಕುಟುಂಬ ಒಂದೇ ಎನ್ನುತ್ತಾ ವಿಶ್ವಮಾನವ ಪರಿಕಲ್ಪನೆಗೆ ವಿಸ್ತರಿಸುವ ದೃಷ್ಟಿಗೆ ಹೆಚ್ಚು ಒತ್ತು ನೀಡುತ್ತಾರೆ. ಹೊಸ ಮೌಲ್ಯಗಳು ಪೌರ್ವಾತ್ಯರ ಧಾರ್ಮಿಕ ಪರಂಪರೆಗೆ ಹೊಂದಾಣಿಕೆಯಾಗುವುದು ಸ್ಫುಟವಾಗಿ ಕಾಣುತ್ತಿದೆ ಮತ್ತು ಯೂರೋಪಿನ ಹಾಗೂ ಅಮೆರಿಕದ ಅನೇಕ ಧಾರ್ಮಿಕ ಚಟುವಟಿಕೆಗಳು ಪೌರ್ವಾತ್ಯರ ಪ್ರತಿಭೆಯಿಂದ ಪ್ರಭಾವಿತರಾಗಿ ಅದನ್ನೇ ಸಮರ್ಥಿಸುತ್ತವೆ.

ಸಂಯುಕ್ತ ಸಂಸ್ಥಾನಗಳ ಸಾಂಸ್ಕೃತಿಕ ಕ್ಷೇತ್ರದ ಸ್ವಾರಸ್ಯಗಳಲ್ಲಿ ಮೂರು ಅಲೆಗಳು– ಪರಿಸರ, ಧಾರ್ಮಿಕತೆ ಮತ್ತು ಸ್ತ್ರೀವಾದ– ಈಚೆಗೆ ಪ್ರಮುಖವಾಗಿವೆ. ಪರಿಸರ ದರ್ಶನದ ಧಾರ್ಮಿಕ ಮೂಲವು, ಸ್ತ್ರೀವಾದಿ ಧರ್ಮದಲ್ಲಿ ಶ್ರೇಷ್ಠವಾಗಿ ವ್ಯಕ್ತವಾಗಿರುವಂತೆ ಕಾಣುತ್ತದೆ. ಪ್ರಕೃತಿಯನ್ನು 'ಸ್ತ್ರೀ' ಎಂದು ಪರಿಗಣಿಸುವ ಅನಾದಿ ಕಾಲದ ಭಾವನೆಯೇ ಮಹಿಳಾ ಚಳುವಳಿಯ ಈ ವಾದದ ಮೂಲವಿರಬಹುದು. ಹುಟ್ಟು ಸಾವಿನ ಚಿತ್ರದಲ್ಲಿ ಸಿಲುಕಿಕೊಂಡಿರುವ ಎಲ್ಲ ಜೀವಿಗಳೂ ಒಂದೇ ಎಂಬ ಜಾಗೃತಿಯೇ ಸ್ತ್ರೀವಾದಿ ಧರ್ಮದ ಮೂಲ– ಅದೇ ಗಾಢವಾದ ಪರಿಸರ ಪ್ರಜ್ಞೆಯಿಂದ ಕೂಡಿದ ಜೀವನ ದೃಷ್ಟಿಗೆ ಕಾರಣ. ಸ್ತ್ರೀ ದೇವತೆಗಳ ಕಲ್ಪನೆಯಲ್ಲಿ ಇಂತಹ ಧರ್ಮವು, ಪುರುಷ ದೇವತಾ ಕಲ್ಪನೆಗಿಂತಲೂ ಹೆಚ್ಚು ಕರಾರುವಾಕ್ಕಾಗಿ

ಮೂರ್ತೀಭವಿಸುತ್ತದೆ ಎನ್ನುವುದು ಹಲವು ಲೇಖಕಿಯರ ಅಭಿಪ್ರಾಯ. ಪೂರ್ವ–ಪಶ್ಚಿಮ ಸಂಸ್ಕೃತಿಯಲ್ಲಿ ಪುರುಷದೇವತೆಗಳಿಗಿಂತಲೂ ಸ್ತ್ರೀ ದೇವತೆಗಳ ಪೂಜೆಯೇ ಪ್ರಾಚೀನವಾದುದು. ಸ್ತ್ರೀ ದೇವತೆಗಳು ಪುನರುಜ್ಜೀವಿತದಿಂದ ಸ್ತ್ರೀವಾದಿಗಳು ಮಹಿಳೆಯರಿಗೆ ಹೊಸದಾದ ಸ್ವಂತಿಕೆಯನ್ನ ಸೃಷ್ಟಿಸಿ, ಹೊಸ ಚಿಂತನಾಮಾರ್ಗವನ್ನು ರೂಪಿಸಿ, ಹೊಸ ಮೌಲ್ಯವನ್ನು ಸ್ಥಾಪಿಸಿದ್ದಾರೆ. ಈ ಸ್ತ್ರೀವಾದಿ ಚಿಂತನೆಯು ಮತ–ಧರ್ಮಗಳಲ್ಲಿ ಮಾತ್ರವಲ್ಲದೆ, ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿಯೂ ಗಾಢವಾದ ಪ್ರಭಾವವನ್ನು ಬೀರುತ್ತದೆ.

ಇಂದು ಕೇವಲ ಸ್ತ್ರೀವಾದಿ ಚಳುವಳಿ ಮಾತ್ರವಲ್ಲ, ಜಾತಿ ಆಧಾರಿತ ಭಾವನೆಗಳಿಂದ ತುಳಿತಕ್ಕೊಳಗಾದವರ ಕ್ರಾಂತಿಯೂ, ಸಾಂಪ್ರದಾಯಿಕ ಮಾನವ ಸ್ವಭಾವಗಳ ತಳಹದಿಯನ್ನೇ ಸವಾಲಿಗೆ ಒಡ್ಡಿದೆ. ಜಾಗತಿಕ ಸ್ತರದಲ್ಲಿಯೂ, ತೃತೀಯರಂಗದ ರಾಷ್ಟ್ರಗಳಲ್ಲಿಯೂ ತಾವು "ಕಡಿಮೆ ಅಭಿವೃದ್ಧಿ" ಹೊಂದಿದವರು ಎಂಬ ನಿಲುವನ್ನು ಹೊಂದಿರುವ ಕೈಗಾರಿಕಾ ರಾಷ್ಟ್ರಗಳನ್ನು ಪ್ರಶ್ನಿಸುವ ಅಧಿಕಾರ ಹುಟ್ಟಿಕೊಳ್ಳುತ್ತಿದೆ. ಉತ್ತರಾರ್ಧ ಗೋಳದಲ್ಲಿ ಬಿಕ್ಕಟ್ಟಿನ ಹಲವು ಮುಖಗಳನ್ನು ನಿಚ್ಚಳವಾಗಿ ನೋಡುವ ನಾಯಕರು ಹೆಚ್ಚುತ್ತಿದ್ದಾರೆ. ಮತ್ತು ಕೈಗಾರಿಕಾ ಜಗತ್ತಿನ ಸಮಸ್ಯೆಗಳನ್ನು ದಕ್ಷಿಣಾರ್ಧಗೋಳಕ್ಕೆ ರವಾನಿಸುವ ಅವರ ಪ್ರಯತ್ನವನ್ನು ತಡೆಯುತ್ತಿದ್ದಾರೆ.

ಇದುವರೆಗೂ ನಾನು ವಿವರಿಸಿದ ಚಳುವಳಿಗಳು ಬೇರೆ ಬೇರೆಯಾಗಿಯೇ ಕೆಲಸ ಮಾಡುತ್ತಿವೆ. ತಮ್ಮ ಉದ್ದೇಶಗಳು ಹೇಗೆ ಪರಸ್ಪರ ಸಂಬಂಧಪಟ್ಟಿವೆ ಎಂಬುದನ್ನಿನ್ನೂ ಅವರು ಗಮನಿಸಿಲ್ಲ. ಆದರೆ ಕೆಲವು ಗಮನಾರ್ಹವಾದ ಒಕ್ಕೂಟಗಳು ಇತ್ತೀಚೆಗೆ ರೂಪುಗೊಳ್ಳುತ್ತಿವೆ. ವಿವಿಧ ಚಳುವಳಿಗಳನ್ನು ಒಕ್ಕೂಡಿಸುವಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ. ಇಂದು ಸ್ತ್ರೀವಾದವು ಪ್ರಧಾನವಾದ ಸಾಂಸ್ಕೃತಿಕ ಬಲವನ್ನು ಪ್ರತಿನಿಧಿಸುತ್ತಿರುವುದು– ಇದು ಆಶ್ಚರ್ಯಕರವಾದದ್ದೇನೂ ಅಲ್ಲ– ವಿಶೇಷವಾಗಿ ಉತ್ತರ ಅಮೆರಿಕ ಮತ್ತು ಯೂರೋಪುಗಳಲ್ಲಿ ಕಾಣುತ್ತಿದೆ. ವಿವಿಧ ಸಾಮಾಜಿಕ ಚಳುವಳಿಗಳನ್ನು ಒಗ್ಗೂಡಿಸುವಲ್ಲಿ ಮಹಿಳಾ ಸಂಘಗಳು ಪ್ರಧಾನ ಪಾತ್ರ ವಹಿಸುವ ಸಾಧ್ಯತೆಗಳು ಅಧಿಕವಾಗಿದೆ.

ನೂರಾರು ಗುಂಪುಗಳನ್ನು ಜಾಲಗಳನ್ನೂ ಈಗಾಗಲೇ ಜೋಡಿಸಿಕೊಂಡಿರುವ ಹೊಸ ಒಕ್ಕೂಟಗಳು ಮತ್ತು ಸಂಘಟನೆಗಳು ಪುರೋಹಿತ ಪ್ರಭುತ್ವದ ದಬ್ಬಾಳಿಕೆಯನ್ನು ಒಪ್ಪದೆ, ಅಹಿಂಸೆಯಿಂದ ಕಾರ್ಯನಿರ್ವಹಿಸುತ್ತಾ ಗುರಿಯೆಡೆಗೆ ಸಾಗಿದೆ. ಕೆಲವಂತೂ ಪ್ರಪಂಚದಲ್ಲಿ ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ. 'ಆಮ್ನೆಸ್ಟಿ' ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಇಂತಹ ಒಕ್ಕೂಟದ ಒಂದು ಉದಾಹರಣೆ. ಬಹುಮುಖ ಜಾಲಗಳೂ, ಸಂಘಟನೆಗಳೂ, ಇನ್ನೂ ರಾಜಕೀಯ

ಕ್ಷೇತ್ರದಲ್ಲಿ ಭದ್ರವಾದ ನೆಲೆ ಕಂಡುಕೊಂಡಿಲ್ಲ. ಆದರೆ ವಾಸ್ತವದ ಹೊಸ ದರ್ಶನವನ್ನು ಕುರಿತು ವಿಚಾರ ಮಂಡನೆ ಮುಂದುವರೆದಂತೆ ಸೂಕ್ತ ರೀತಿಯಲ್ಲಿ ಜನಜಾಗೃತಿ ಉಂಟಾದಾಗ ಅದು ಹೊಸ ರಾಜಕೀಯ ಪಕ್ಷಗಳನ್ನು ತಲುಪುತ್ತದೆ.

ವಿವಿಧ ಚಳುವಳಿಗಳು ತಮ್ಮ ಸಮುದಾಯದ ಗುರಿಯನ್ನು ಗುರುತಿಸಿಕೊಂಡು ಒಟ್ಟಿಗೇ ಮುಂದುವರೆದಾಗ, ಸಾಮಾಜಿಕ ಬದಲಾವಣೆಗೆ ಒಂದು ಪ್ರಬಲವಾದ ಶಕ್ತಿ, ಈ ದಶಕದಲ್ಲಿಯೇ ದೊರೆಯುವುದೆಂಬ ನಂಬಿಕೆ ನನಗಿದೆ. ಟಾಯನ್‌ಬೀ ಅವರ ಸಾಂಸ್ಕೃತಿಕ ಚಟುವಟಿಕೆಯ ನಡಾವಳಿಯ ಮಾದರಿಯನ್ನು ಅನುಸರಿಸಿ, ನಾನು ಈ ಶಕ್ತಿಯನ್ನು "ಅರಳುತ್ತಿರುವ ಸಂಸ್ಕೃತಿ" ಎಂದು ಕರೆಯುತ್ತೇನೆ. ಸಂಸ್ಕೃತಿಯು ಒಂದು ನಿರ್ದಿಷ್ಟ ಮಾದರಿಯಲ್ಲಿ ವಿಕಾಸ ಹೊಂದಿ, ಬೆಳೆಯುತ್ತಾ ಅತ್ಯಂತ ಉನ್ನತ ಸ್ಥಿತಿಯನ್ನು ತಲುಪಿ, ನಂತರ ಶಿಥಿಲವಾಗುತ್ತ ನಾಶವಾಗುವುದು ಎಂದು ಟಾಯನ್‌ಬೀ ಮತ್ತಿತರ ಸಾಂಸ್ಕೃತಿಕ ಇತಿಹಾಸತಜ್ಞರು ಗುರುತಿಸಿದ್ದಾರೆ. ಆಚರಣೆಗಳಲ್ಲಿ, ಅಭಿಪ್ರಾಯಗಳಲ್ಲಿ, ಸಾಮಾಜಿಕ ಸಂಘಟನೆಗಳಲ್ಲಿ, ಬದಲಾವಣೆಯ ಸವಾಲನ್ನು ಸ್ವೀಕರಿಸಲಾರದಷ್ಟು ಕಠಿಣವಾದಾಗ ಸಂಸ್ಕೃತಿಯು ನಾಶವಾಗಲು ತೊಡಗುತ್ತದೆ. ಹೊಂದಾಣಿಕೆಯೂ ಸಾಮರಸ್ಯವೂ ಇಲ್ಲದಾಗ ಒಡಕೂ ಅಸಮ್ಮತಿಯೂ ಅನಿವಾರ್ಯವಾಗುತ್ತದೆ. ಈ ರೀತಿಯ ಶಿಥಿಲ ಮತ್ತು ನಾಶವಾಗುವ ಪ್ರಕ್ರಿಯೆಯಲ್ಲಿ, ಸಂಸ್ಕೃತಿಯ ಮುಖ್ಯವಾಹಿನಿಯು, ಬಿಗಿ ಅಭಿಪ್ರಾಯಗಳಿಗೆ, ಕಠಿಣಾಚರಣೆಗಳಿಗೆ ಸಿಲುಕಿಕೊಂಡಿದ್ದಾಗ, ಸೃಜನಶೀಲ ಉಪಪಂಗಡಗಳು ಮುಂದೆ ಬಂದು ಕೆಲವು ಹಳೆಯ ಮೂಢಾಚರಣೆಗಳಿಗೆ ಹೊಸ ರೂಪ ಕೊಟ್ಟು 'ಅರಳುತ್ತಿರುವ ಸಂಸ್ಕೃತಿ'ಯ ಭಾಗವಾಗುತ್ತದೆ.

ಯೂರೋಪ್ ಮತ್ತು ಉತ್ತರ ಅಮೆರಿಕ ದೇಶಗಳಲ್ಲಿ ಈ ಚಿತ್ರ ನಿಚ್ಚಳವಾಗಿ ಕಾಣುತ್ತಿದೆ. ಹಲವು ಹಳೆಯ ರಾಜಕೀಯ ಪಕ್ಷಗಳು, ಅಂತರರಾಷ್ಟ್ರೀಯ ಬೃಹತ್ ಸಂಸ್ಥೆಗಳು ಮತ್ತು ಹಲವಾರು ಬೃಹತ್ ವಿದ್ಯಾಸಂಸ್ಥೆಗಳು ಈ ರೀತಿಯ ಶಿಥಿಲವಾಗುತ್ತಿರುವ ಸಂಸ್ಕೃತಿಯ ಭಾಗವಾಗಿವೆ. ಅವುಗಳೀಗ ವಿನಾಶದ ಅಂಚಿನಲ್ಲಿವೆ. ೧೯೬೦–೭೦ರ ದಶಕದ ಸಾಮಾಜಿಕ ಚಳುವಳಿಗಳು 'ಅರಳುತ್ತಿರುವ ಸಂಸ್ಕೃತಿ'ಯನ್ನು ಪ್ರತಿನಿಧಿಸುತ್ತಿವೆ. ಅವು ಈಗ ಸೌರಯುಗ ಪ್ರವರ್ತಕವಾಗುತ್ತಿವೆ. ಬದಲಾವಣೆಗಳು ನಡೆಯುತ್ತಿರುವಾಗಲೇ, ನಶಿಸುತ್ತಿರುವ ಸಂಸ್ಕೃತಿಯು ಬದಲಾಯಿಸಲು ನಿರಾಕರಿಸುತ್ತಿವೆ; ಬದಲಿಗೆ ಇನ್ನೂ ಹೆಚ್ಚು ಭದ್ರವಾಗಿ ಹಳೆಯ ಅಭಿಪ್ರಾಯಗಳಿಗೆ ಅಂಟಿಕೊಳ್ಳುತ್ತಿವೆ. ಪ್ರಬಲವಾದ ಸಾಮಾಜಿಕ ಸಂಸ್ಥೆಗಳು ತಮ್ಮ ಪ್ರಮುಖ ಕಾರ್ಯಭಾಗವನ್ನು ಹೊಸ ಸಂಸ್ಕೃತಿಯ ವ್ಯಾಪ್ತಿಗೆ ವರ್ಗಾಯಿಸುವುದೂ ಇಲ್ಲ. ಅಂದರೆ ಅವು ಶಿಥಿಲವಾಗುತ್ತಾ ವಿನಾಶದ ಅಂಚಿಗೆ ತಲುಪುವುದು ಅನಿವಾರ್ಯವಾಗುತ್ತದೆ, ಹಾಗೂ ಅರಳುತ್ತಿರುವ ಸಂಸ್ಕೃತಿ ಬೆಳೆಯುತ್ತಾ ಕ್ರಮೇಣ ಪ್ರಮುಖ ಪಾತ್ರವನ್ನು ಪಡೆದುಕೊಳ್ಳುತ್ತದೆ.

ಈ ರೀತಿಯ ಸಾಂಸ್ಕೃತಿಕ ಬದಲಾವಣೆಯಲ್ಲಿ ವಿಜ್ಞಾನಿಗಳ– ವಿಶೇಷವಾಗಿ ಭೌತವಿಜ್ಞಾನಿಗಳ– ಪಾತ್ರ ಪ್ರಮುಖವಾದದ್ದು ಎಂದು ನಾನು ನಂಬಿದ್ದೇನೆ. ಹದಿನೇಳನೆಯ ಶತಮಾನದಿಂದಲೇ ಭೌತವಿಜ್ಞಾನವು ಖಚಿತ ವಿಜ್ಞಾನಕ್ಕೆ ಉತ್ತಮ ಉದಾಹರಣೆಯಾಗಿ, ಉಳಿದ ವಿಜ್ಞಾನ ಶಾಖೆಗಳಿಗೆ ಮಾದರಿಯಾಗಿ ಕೆಲಸ ನಿರ್ವಹಿಸುತ್ತಿದೆ. ಎರಡೂವರೆ ಶತಮಾನಗಳಿಂದ ಭೌತವಿಜ್ಞಾನಿಗಳು ತಮ್ಮ ಪರಿಕಲ್ಪನೆಗಳ ಚೌಕಟ್ಟನ್ನು ಹಿಗ್ಗಿಸಲು, ತಿದ್ದಲು, ವಿಶ್ವದ ಯಾಂತ್ರಿಕ ದೃಷ್ಟಿಯನ್ನು ಬಳಸಿಕೊಂಡಿದ್ದಾರೆ. ಇಪ್ಪತ್ತನೆಯ ಶತಮಾನದಲ್ಲಿ ಭೌತವಿಜ್ಞಾನವು ತನ್ನ ಪರಿಕಲ್ಪನೆಗಳಲ್ಲಿ ಹಲವಾರು ವಿಪ್ಲವಗಳನ್ನು ಕಂಡಿದೆ. ಅದರಿಂದ ಯಾಂತ್ರಿಕ ದೃಷ್ಟಿಯ ಇತಿಮಿತಿಗಳ ಅರಿವು ಉಂಟಾಗಿ, ಪರಿಸರ ಸ್ನೇಹಿ ಜೀವನ ದೃಷ್ಟಿ–ಅಧ್ಯಾತ್ಮ ದೃಷ್ಟಿಗೆ ವಿಶೇಷವಾಗಿ ಪೌರ್ವಾತ್ಯರ ಅಧ್ಯಾತ್ಮ ಪರಂಪರೆಗೆ ಬಹುವಾಗಿ ಹೊಂದಿಕೊಳ್ಳುವ ದೃಷ್ಟಿಯನ್ನು ಬೆಳೆಸಿಕೊಳ್ಳುತ್ತಿದೆ. ಅದರಿಂದಲೇ ಇಂದು ಪ್ರಪಂಚಕ್ಕೆ ತುರ್ತಾಗಿ ಬೇಕಾಗಿರುವ ಮೌಲ್ಯಗಳ, ಭಾವನೆಗಳ ಬದಲಾವಣೆಗೆ ಸೂಕ್ತವಾದ ವೈಜ್ಞಾನಿಕ ಹಿನ್ನೆಲೆಯನ್ನು ಭೌತವಿಜ್ಞಾನಿಗಳು ಒದಗಿಸಬಲ್ಲರು. ವೈಜ್ಞಾನಿಕ ಚಿಂತನೆಯು ಯಾಂತ್ರಿಕತೆ ಮತ್ತು ವಿಶ್ಲೇಷಣೆಗಳಿಂದಲೇ ನಡೆಯಬೇಕಾಗಿಲ್ಲ, ಸಮಗ್ರತೆ ಮತ್ತು ಪರಿಸರ ದೃಷ್ಟಿಯಿಂದಲೂ ನಡೆಯಬಹುದು ಎಂಬುದನ್ನು ಆಧುನಿಕ ಭೌತವಿಜ್ಞಾನವು ತೋರಿಸಿದೆ. ಆದ್ದರಿಂದ ಸಮಗ್ರದೃಷ್ಟಿಯನ್ನು ಅವೈಜ್ಞಾನಿಕ ಎಂದು ವಿಜ್ಞಾನಿಗಳು, ವ್ಯಾಪಾರಸ್ಥರು ಮತ್ತು ರಾಜಕಾರಣಿಗಳು ತಿಳಿಯಬೇಕಿಲ್ಲ. ಆತುಕೊಳ್ಳಲು ಹಿಂಜರಿಯಬೇಕಿಲ್ಲ. ಅಂತಹ ಒಂದು ವಿಧಾನವು, ಪ್ರಾಚೀನ ಪ್ರತಿಭೆಯೊಂದಿಗೆ ಸಾಮರಸ್ಯದಲ್ಲಿರುತ್ತದೆ ಮತ್ತು ಹೊಸ ವೈಜ್ಞಾನಿಕ ತತ್ವಗಳಿಗೂ ಹೊಂದಿಕೊಳ್ಳುತ್ತದೆ ಎಂದು ಆಧುನಿಕ ಭೌತವಿಜ್ಞಾನವು ಸಾಬೀತುಪಡಿಸಬಲ್ಲುದು.

* * * *